ಕೊರವಂಜಿ



ಅಕ್ಟೋಬರ್

೧೯೬೪

★

KORAVANJI
Kannada Monthl

★

ಸಂಪಾದಕರು :

ಶ್ರೀ|| ರಾ ಶಿ.

★

ಬರಹಗಾರರು :

ಶ್ರೀ|| ಬಚ್ಚು

ಶ್ರೀಮತಿ ಟಿ. ಸುನಂದಮ್ಮ

ಶ್ರೀ|| ರಾಮಿ

ಶ್ರೀ|| ಕೇಫ

ಶ್ರೀ|| ಆ. ರಾ. ಸೇ.

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL
KASTURI SOAP
MANYAM & CO. BANGALORE MADRAS MADURAI BOMBAY.

"ಅಮರಶಿಲ್ಪಿ ಜಕಣಾಚಾರಿ"ಯ ನಂತರ ಕನ್ನಡ ನಾಡಿಗೆ

ವಿಕ್ರಮ್‌ರವರ ಮತ್ತೊಂದು ಕಾಣಿಕೆ !

ತಾ|| ೯—೧೦—೧೯೬೪ ರಿಂದ

ಬೆಂಗಳೂರು : ಜೈಹಿಂದ್ — ಭಾರತ್ — ನವರಂಗ್
ಮೈಸೂರು : ಪ್ರಭುದೇವ – ದಾವಣಗೆರೆ : ಗೀತಾಂಜಲಿ – ಹಾಸನ : ಇಂಪೀರಿಯಲ್
ಶಿವಮೊಗ್ಗ : ವಿನಾಯಕ – ಚಿತ್ರದುರ್ಗ : ಯೂನಿಯನ್ – ತುಮಕೂರು : ಶ್ರೀ
ಹೊಸಪೇಟೆ : ವೆಂಕಟೇಶ್ವರ ಪಿಕ್ಚರ್ ಪ್ಯಾಲೇಸ್
ಚಿತ್ರಮಂದಿರಗಳಲ್ಲಿ



ವಿಕ್ರಮ್ ಪ್ರೊಡಕ್ಷನ್ಸ್‌ರವರ—

ಪ್ರತಿಜ್ಞೆ (ಕನ್ನಡ)

ನಿರ್ಮಾಪಕ-ನಿರ್ದೇಶಕ-ಛಾಯಾಗ್ರಾಹಕ : **ಬಿ. ಎಸ್. ರಂಗಾ**

ಹಂಚಿಕೆ : **ವಿಕ್ರಮ್ ಪಿಕ್ಚರ್ಸ್, ಗಾಂಧಿನಗರ, ಬೆಂಗಳೂರು-೯**

ನಿಮ್ಮೂರಿನ ನೆಚ್ಚಿನ ಚಿತ್ರಮಂದಿರಗಳಲ್ಲಿ



ಕೊರವಂಜಿ

A. ANANTHIAH

ಸಂಪುಟ ೨೩] ಅಕ್ಟೋಬರ್ ೧೯೬೪ [ಸಂಚಿಕೆ ೭

ಕು ಹ ಕಿ ಡಿ ಗ ಳು

ಬಳ್ಳಾರಿಯಲ್ಲಿ ೧೦೦೦ ದಿನಸಿ ಮೂಟೆಗಳನ್ನು ಜನರು ಲೂಟಿ ಮಾಡಿದಾಗ ಮಂಡಿ ಮಾಲೀಕರು ದುಃಖ ಪಡಲೇ ಇಲ್ಲವಂತೆ.

—ಜನರು ಲೂಟಿ ಮಾಡಿದರೇನು ? ಸ್ಟೇಟ್ ಟ್ರೇಡಿಂಗ್ ಸಂಸ್ಥೆ ಕೊಳ್ಳೆ ಹೊಡೆದುಕೊಂಡು ಹೋದರೇನು ? ಎಂದು ಸಮಾಧಾನದಿಂದಲೇ ಇದ್ದರಂತೆ.

*   *   *   *

ರೇಡಿಯೋನ ಮನಗೆ ತಂದಮೇಲೆ ಮಗು ಅಳೋದನ್ನೇ ನಿಲ್ಲಿಸಿಬಿಟ್ಟಿದೆ.

(ವರದಿ)

—ಮನೇಲಿ ಯಾವುದಾದರೂ ಒಂದು ಅಳು ಇದ್ದರೆ ಸಾಕು ! ಅಂತ ಮಗು ವಿಗೆ ಗೊತ್ತು.

*   *   *   *

ಗಯಾ ತೀರ್ಥಯಾತ್ರೆಗೆ ನಮ್ಮೂರ ಮುಖಂಡರು ಹೊರಟಾಗ "ಪ್ರಿಯವಾದುದು ಯಾವುದಾದರೂ ಒಂದನ್ನು ಗಯೆಯಲ್ಲಿ ಬಿಡಬೇಕು. ಏನು ಬಿಡಲಯ್ಯ" ಎಂದು ಕೇಳಿದರು ಏನು ಹೇಳುಕ್ಕೂ ತೋಚಲಿಲ್ಲ, ಎಂದೊಬ್ಬರು ಬರೆದಿದ್ದಾರೆ.

—ಮಂಕ ! ಭಾಷಣ ಮಾಡೋದನ್ನ ಬಿಡಿ ಅಂತ ಹೇಳಬಾರದಾಗಿತ್ತೆ ?

*   *   *   *

ನಮ್ಮನೆಯ "ಲಾಕರ್" ಅನ್ನು ಗಣಪತಿ ವಿಗ್ರಹದ ಹೊಕ್ಕಳ ಒಳಗೆ ಮರೆಸಿಟ್ಟಿದ್ದೀವಿ, ಯಾವ ತೆರಿಗೆ ಅಧಿಕಾರಿ ಬಂದು ತಲಾಷ್ ಮಾಡ್ತಾನೋ ನೋಡೋಣ ಎಂದೊಬ್ಬರು ಬಹಿರಂಗವಾಗಿ ಹೇಳಿದರಂತೆ.

—ತೆರಿಗೆ ಅಧಿಕಾರಿಗಳು " ಆ ಕತೆ ಹಳೆಯದು. ನಾವೇನೂ ಬೆರಳಿಟ್ಟು ಚೇಳಿನ ಕೈಯಲ್ಲಿ ಕಚ್ಚಿಸಿಕೊಳುಲ್ಲ " ಎಂದು ಉತ್ತರಿಸಿದರಂತೆ.

ಮಕ್ಕಳ ಮೈಗೆ ಮೀನೆಣ್ಣೆ ಒಳ್ಳೆಯದು ಎಂದು ಡಾಕ್ಟರು ಹೇಳಿದ್ದರು. ಅದಕ್ಕೇ ನಮ್ಮ ಮಗೂಗೆ ಮೀನೆಣ್ಣೆ ಕುಡಿಸುತ್ತಾ ಬಂದೆವು. ಈಗ ಎಂಟು ವರ್ಷ ತಲೆಯಲ್ಲಿ ಮೇಣ ತುಂಬಿದೆಯೇ ಎಂದು ಅನುಮಾನ ಬರುತ್ತಿದೆ ಎಂದೊಬ್ಬಾಕೆ ಹೇಳಿದ್ದಾಳೆ.

—ಹೆದರಬೇಡಿ ತಾಯಿ! ಹೊರವಾಗಿ ಬೆಳೆದಮೇಲೆ ಮಂತ್ರಿ ಆದರೂ ಆದಾನು!

*   *   *   *

ಅಮೆರಿಕಾದ ಪ್ರವಾಸಿಗಳು ತಾಜ್‌ಮಹಲನ್ನು ಸುಲಭವಾಗಿ ನೋಡಲೋಸುಗ ಅವರನ್ನು ಹೆಲಿಕಾಪ್ಟರಿನಲ್ಲಿ ತಾಜ್‌ಮಹಲ್‌ಮೇಲೆ ಹಾರಾಡಿಸುವ ವ್ಯವಸ್ಥೆಯನ್ನು ಮಾಡುತ್ತಾರೆ ಎನ್ನುವುದು ಕುಹಕ.

*   *   *   *

ಅನ್ಯಾಯ ಆಗಿ ಹೋಯಿತು! ಸರ್ಕಾರದವರು ಬ್ಯಾಂಕ್ ದರಗಳನ್ನು ೪ ೫ ರಿಂದ ೫ ಕ್ಕೆ ಏರಿಸಿಬಿಟ್ಟರು.

—ಇನ್ನು ನಮ್ಮ ಸರ್ಕಾರ, ಅಂದರೆ, ನಮ್ಮ ಪರಾಣ. ೧೫ರಿಂದ ೩೦ ಕ್ಕೆ ಬಡ್ಡಿ ಎಬ್ಬಿಸಿ ಬಿಟ್ಟಾನಲ್ಲಪ್ಪಾ !!

*   *   *   *

ಹೆಬ್ಬಿ ಗುಬ್ಬಾಲೆ ಸಾಹುಕಾರರಿಗೆ ಈ ಸಾರಿ ದೀಪಾವಳಿಯ ಹೊತ್ತಿಗೆ ಅಷ್ಟಗ್ರಹದ ಕೂಟ ಬಡಿಯುತ್ತದಂತೆ.

—ಎಂಟೂ ಜನ ಅಳಿಯಂದಿರು ಒಟ್ಟಿಗೆ ಮುತ್ತಿಗೆ ಹಾಕುತ್ತಾರಂತೆ.

*   *   *   *

ಶಿಸ್ತು ಸಂಯಮ ಕಲಿಸುವುದರಿಂದಲೇ ಕಾಂಗ್ರೆಸ್ ಕಾರ್ಯಕರ್ತನಾಗುವುದು ಅಸಾಧ್ಯ. ಅದೊಂದು ಹುಟ್ಟುಗುಣ. (ಹೇಳಿಕೆ)

—ಹುಟ್ಟುಗುಣ ದಿಟ. ಹೀನ ಸುಳಿ ಇದ್ದ ಹಾಗೆ. ಬೋಳಿಸಿದರೂ ಹೋಗುಲ್ಲ.

*   *   *   *

ಕೇರಳದ ಮಂತ್ರಿಗಳಿಗೆ ಒಂದು ದೊಡ್ಡ ಮನೆ, ಒಂದು ಮೋಟಾರು ಕಾರು, ಪುಕಟ್ಟಾಗಿ ಕೊಡಲ್ಪಡುತ್ತದಂತೆ.

—ಹೊಟ್ಟೆ ಉರಿಯಬೇಕಾಗಿಲ್ಲ ಇದನ್ನು ಕೇಳಿ. ಸ್ವಲ್ಪ ದಿನಗಳು ತಾನೆ ಅವರು ಅದನ್ನು ಅನುಭವಿಸಲು ಸಾಧ್ಯ.

ನಿರ್ಮಲೀಕರಣ

(ಮೇಯರಿಗೆ ವೈಯಕ್ತಿಕ ಪತ್ರ)

★

ಮಹಾತ್ಮಾ ಗಾಂಧೀಜಿಯವರ ಜಯಂತ್ಯುತ್ಸವವನ್ನು ಈ ವರ್ಷ ಹದಿನೈದು ದಿನ "ನಿರ್ಮಲೀಕರಣ" ಪಕ್ಷವನ್ನಾಗಿ ಆಚರಿಸಬೇಕೆಂದು ರಾಷ್ಟ್ರವು ನಿಶ್ಚಯಿಸಿದೆ. ತತ್ ಪ್ರಕಾರ ಮಾನ್ಯ ನಗರಾಧ್ಯಕ್ಷರಾದ ನೀವು, ನಗರದ ಹತ್ತೂ ಭಾಗಗಳಲ್ಲಿ ಅತಿ ಉತ್ಸಾಹದಿಂದ, ನಿರ್ಮಲೀಕರಣವನ್ನು ಆಚರಿಸಲು ಕಂಕಣ ಕಟ್ಟಿಕೊಂಡಿದ್ದೀರಿ. ಯೋಗ್ಯ ಕಾರ್ಯ, ಸ್ತುತ್ಯ ಹುಮ್ಮಸ್ಸು. ಮಾಡಬೇಕಾದ್ದೇ.

ಆದರೆ ಹುಮ್ಮಸ್ಸಿನಿಂದ ಕೆಲಸ ಮಾಡೋವಾಗ, ಕಣ್ಣಿಗೆ ಕಾಣೋ ಹಾಗಿರುವ ಚರಂಡಿ. ತಿಪ್ಪೆಗುಂಡಿ, ಇತ್ಯಾದಿಗಳನ್ನೇ ಶುದ್ಧೀಕರಣ ಮಾಡುವ ಹಾಗಾಗುತ್ತೆ. ಕಸ ಎಲ್ಲ ಗುಡಿಸಿ ನಮ್ಮ ಹುಡುಗಿ ಜಮಖಾನದ ಕೆಳಗೆ ನೂಕುಲ್ಲವೇ, ಹಾಗೆ ಮಾಡೋ ಹಾಗೆ ಆಗುತ್ತೆ. ಆದ್ದರಿಂದ ನಿರ್ಮಲೀಕರಣ ಮಾಡೋವಾಗ, ಜಮಖಾನವನ್ನು ತೆಗೆದು, ಅದರ ಕೆಳಗೆ ಗುಡಿಸಬೇಕು. ಅಲ್ಲವೇ ? ಆದುದರಿಂದ ಅತಿ ಮುಖ್ಯವಾಗಿ ನಿರ್ಮಲಗೊಳಿಸಬೇಕಾದ ಕೆಲವು ವಿಷಯಗಳನ್ನು ಬಿನ್ನವಿಸಿಕೊಳ್ಳಬೇಕು ಎಂದಿನಿಸಿತು ಎಲ್ಲ ಸಾರ್ವಜನಿಕರ ಸಹಕಾರವನ್ನು ಕೋರಿದ ಕಳಕಳಿಯ ನಿಮ್ಮ ಹೇಳಿಕೆಯನ್ನು ಕೇಳಿದಮೇಲೆ.

ಸ್ವಾಮಿ ! ಸರ್ವಮಾನ್ಯ ಅಧ್ಯಕ್ಷರೇ. ದೇವಸ್ಥಾನಗಳನ್ನು ಪರಿಶುದ್ಧಿ ಮಾಡಲು ನಿಮ್ಮ ತಂಡದವರು ಖಂಡಿತವಾಗಿ ಹೋಗುತ್ತಾರೆ ಅಲ್ಲಿ ಪಾಕಶಾಲೆ ಶೌಚಶಾಲೆಗಳನ್ನು ಅತಿ ಶ್ರದ್ಧೆಯಿಂದ ಶುದ್ಧಿಗೊಳಿಸುತ್ತಾರೆ. ದಿಟ. ಆದರೆ ದೇವಸ್ಥಾನಗಳಲ್ಲಿ ಅತಿ ಕಲ್ಮಷ ಹೊಂದಿರುವ ವಸ್ತುವನ್ನು ಮರೆತೇಬಿಡುತ್ತಾರ.

ಮೊನ್ನೆ ಕೃಷ್ಣಜಯಂತಿ ನೆಪ ಮಾಡಿಕೊಂಡು, ಪುಳಿಯೋಗರೆ, ಸಕ್ಕರೆ ಪೊಂಗಲೆಂದು, ರಾತ್ರಿ ದೇವಸ್ಥಾನಕ್ಕೆ ಹೋದೆ. ಅರೆಸ್ಟ್‌ದೆಯಲ್ಲಿ ನಿಂತು ತೂಕಡಿಸುತ್ತಿದ್ದಾಗಲೇ 'ಎಚ್ಚರಿಕೆ' ಎಂದು ಪಾಪ್ಪಾರು ಕೂಗಿದರು ಎಚ್ಚೆತ್ತೆ. ಪ್ರಸಾದ ಹಂಚುವುದಕ್ಕೆ ಶುರು ಮಾಡಿದ್ದರು. ಒಂದು ಹಿಡಿ ಪುಳಿಯೋಗರೆ ತಿಂದೆ. ಸಕ್ಕರೆ ಪೊಂಗಲು ಬರುವ ಹೊತ್ತಿಗೆ ಕೈ ಶುದ್ಧವಾಗಿರಬೇಕು ಖಾರದ ಸೋಂಕು ಇರಬಾರದು. ಅಲ್ಲವೇ ಅದಕ್ಕೇ ಯಥಾಪ್ರಕಾರ ಪಕ್ಕದಲ್ಲಿದ್ದ ಕಂಬಕ್ಕೆ ಕೈಯನ್ನು ಉಜ್ಜಿದೆ. ಒತ್ತಿ ಒತ್ತಿ ಉಜ್ಜಿದೆ. ಅಷ್ಟು ಹೊತ್ತಿಗೆ ಸಕ್ಕರೆ ಪೊಂಗಲು ಬಂತು. ಅದೊಂದು ಹಿಡಿ ಹಾಕಿದರು.

ಅದನ್ನು ತಿಂದೆ ಬಲು ರುಚಿಯಾಗಿತ್ತು. ಆದ್ದರಿಂದ ಅಂಗೈಯ್ಯನ್ನು ನೆಕ್ಕಿದೆ. ದರಿದ್ರ ಕಮಟು ವಾಸನೆ ಬಡಿಯಿತು. ಯಾಕೆ ಹೀಗಾಯ್ತು ಎಂದು ಕಂಬಕ್ಕೆ ಒರೆಸಿದೆ. ತಿಕ್ಕಿ ಒರೆಸಿದೆ. ತಿರುಗಿ ವಾಸನೆ ನೋಡಿದೆ. ಅಂಗೈ ದುರ್ನಾತವನ್ನು ಸೂಸುತ್ತಿತು. ಎಲಾ ! ಇದು ಹೇಗೆ ಆಯಿತು ? ಅಂತ ಯೋಚಿಸಿದೆ. ಕಂಬದ ಪ್ರಭಾವವಿರಬಹುದೇ ಎಂದು ಅನುಮಾನ ಬಂತು. ಕಂಬದ ಹತ್ತಿರಕ್ಕೆ ಮೂಗು ಹಾಯಿಸಿದೆ. ಮೂಗಿನ ಸೆಲೆ ಬಡಿಯುವ ಹಾಗೆ ದುರ್ನಾತ, ರೈಲ್ವೆ ಇಂಜಿನ್ನಿನಿಂದ ಹೊಗೆ ಬಂದ ಹಾಗೆ, ಬರುತ್ತಿತ್ತು. ಎಷ್ಟು ಜನರ ಅಂಗೈಯನ್ನು, ಎಷ್ಟು ವರ್ಷಗಳಿಂದಲೋ ಈ ದೇವಸ್ಥಾನದ ಕಂಬಗಳು ಮಿಲಾಯಿಸಿದೆಯೋ ಕಂಬದ ಮೊದಲ ದಪ್ಪವು ಕಲ್ಮಷದಿಂದ ಕೊಳೆಯಿಂದ ಸುಮಾರು ಎರಡರಷ್ಟಾದರೂ ಬೂಸಕ್ಕನಂತೆ ಹೆಚ್ಚಿರಬೇಕು.

ಸ್ವಾಮಿ ! ನಗರಾಧ್ಯಕ್ಷರೇ ! ದೇವಸ್ಥಾನದ ಕಂಬಗಳನ್ನು ತುರಿಯುವ ಮಣೆಯಿಂದ ಮೊದಲು ತರಿದು, ಆನಂತರ ಅರದಿಂದ ಹರೆದು, ಆ ಮೇಲೆ ಸೀಗೇಕಾಯಿ ಡೆಟ್ ಹಾಕಿ ತೊಳಸಿ, ಆಮೇಲೆ ಆಲ್ಕೋಹಾಲಿನಿಂದ ಸಂಪ್ರೋಕ್ಷಣೆ ಮಾಡಿಸಬೇಕು. ಹೀಗೆ ಮಾಡಿದರೆ, ಭಕ್ತಾದಿಗಳಗೆ ದೇವಸ್ಥಾನದಿಂದ ಬರಬಹುದಾದ ಕಾಯಿಲೆಗಳನ್ನು ಬಹುಮಟ್ಟಿಗೆ ನಿವಾರಿಸಬಹುದು,

ಈ ವಿಷಯದಲ್ಲಿ ತಾವು ' ನಿಗಾ ' ವಹಿಸಬೇಕು ಎಂದು ಬೇಡುತ್ತೇನೆ.

ಆದೇ ರೀತಿ ಮೊನ್ನೆ ಹಾಲು ಕೊಂಡು ಕೊಂಡು ಬರಲು ಅಮೃತ ಡೈರಿ ಫಾರಮ್ಮಿಗೆ ಚೊಂಬು ನೀರು ಸಹಿತ ಹೋದೆ. ದನದ ಕೊರಡಿಯು ಗಂಜಲ ಸಗಣೆಯಿಂದ ತುಂಬಿತ್ತು. ಹುಲ್ಲಿನ ಮೆದೆ ಮೇಲೆ ಮೂರು ಮಣ ಬೂದಿ ಬಿದ್ದಿತ್ತು. ಇವನ್ನೆಲ್ಲಾ ನಿಮ್ಮ ಸಿಬ್ಬಂದಿಯುವರು ಖಂಡಿತವಾಗಿ ಶುಚಿಗೊಳಿಸುತ್ತಾರೆ. ದಿಟ. ಆದರೆ ಸ್ವಾಮಿ ! ಹಾಲು ಮಾರುವ ಕೊರಡಿಗೆ ಅನಿರೀಕ್ಷಿತವಾಗಿ ನುಗ್ಗಿದಾಗ, ಹಾಲಿನ ಬಕೆಟ್ಟನ್ನು ನೀರಿನ ಬಕೆಟ್ಟಿಗೆ ಹಾಕುತ್ತಿದ್ದರು. " ಯಾಕ್ರೀ ! ಇಲ್ಲಿಗೆ ಬಂದ್ರಿ " ಎಂದು ರೇಗಿದರು. " ನೋಡಿ ಸ್ವಾಮಿ ! ಒಂದು ಚೊಂಬು ಶುಭ್ರವಾದ ನೀರು ತಂದಿದ್ದೀನಿ ಇದನ್ನು ಬಳಸಿ. ಹಾಲಿಗೆ ಈ ನೀರನ್ನು ಬೆರೆಸಿ ನನಗೆ ಮಾರಿ ನಿಮ್ಮ ವಾಡಿಕೆಯಂತೆ, ವ್ಯಾಪಾರ ಕುದುರುವಂತೆ, ಸರಿಯಾದ ಪ್ರಮಾಣದಲ್ಲಿ ಬೆರೆಸಿ ನನಗೆ ಮಾರಿ. ಮರು ಮಾತಿಲ್ಲದೆ ಕೊಳ್ಳುತ್ತೇನೆ. ಆದರೆ ಆ ಬಕ್ಕೆಟ್ಟಿನಲ್ಲಿರುವ ಕೊಳೆ ನೀರನ್ನು ಬೆರೆಸಿ ಹಾಲನ್ನು ನನಗೆ ಮಾರಬೇಡಿ ಎಂದು ಬೇಡಿಕೊಂಡೆ. ಅವರ ಮನಸ್ಸೂ ಕರಗಿತು ಅಂತ ಕಾಣುತ್ತೆ. ನಾನು ತೆಗೆದುಕೊಂಡು ಹೋಗಿದ್ದ ನೀರನ್ನೇ ಬೆರೆಸಿ ಹಾಲನ್ನು ದಯೆಯಿಂದ ಮಾರಿದರು, " ಏನು ಮಾಡೋದು ಸಾರ್ ! ನಮ್ಮ ಡೈರಿಗೆ ಸರಬರಾಜಾಗುವ ನೀರೇ ಹೀಗಿದೆ. ಓವರ್ ಹೆಡ್ ಟ್ಯಾಂಕಿನಿಂದ ಬರೋ ನೀರು ಓಕುಳಿ ಇದ್ದ ಹಾಗೆ ಇರುತ್ತೆ. ನಾವು ಶೋಧಿಸಿದರೂ ಸುಖವಿಲ್ಲ ಎಂದು ಹೇಳಿಕೊಂಡರು.

ಸ್ವಾಮಿಾ ! ಅಧ್ಯಕ್ಷರೇ ! ನೀರು ಬೆರೆಸಿದ ಹಾಲನ್ನು ಕೊಳ್ಳಲು ನಾವು ಹಿಂಜರಿಯುವುದಿಲ್ಲ. ಆದರೆ ಹಾಲಿಗೆ ಬೆರೆಸುವ ನೀರನ್ನು ಚೆನ್ನಾಗಿ ತೊಳೆಯುವ ಏರ್ಪಾಡು ಮಾಡಿಕೊಟ್ಟರೆ, ನಗರಕ್ಕೆ ನಗರವೇ ನಿಮಗೆ ಚಿರಋಣಿಯಾಗಿರುತ್ತೆ. ನಿಮ್ಮ ಆಯುರಾರೋಗ್ಯಕ್ಕೆ ಪ್ರಾರ್ಥನೆ ಸಲ್ಲಿಸುತ್ತೆ.

ಈ ವಿಷಯದಲ್ಲಿ ನಿಮ್ಮ ಗಮನವನ್ನು ಭೂಬಿಡಿ ಸ್ವಾಮಿಾ.

ಇನ್ನೊಂದು ವಿಷಯವನ್ನು ನಿಮ್ಮ ಅವಗಾಹನೆಗೆ ತರಲು ಮನಸ್ಸು ಸಂಕೋಚಪಡುತ್ತದೆ. ಆದರೂ ಬಾಪೂಜೀ ಹೆಸರು ಹೇಳಿಕೊಂಡು, ಸತ್ಯಾರಾಧನೆ ಮಾಡುವ ಉದ್ದೇಶದಿಂದ, ಇದನ್ನು ಬಿನ್ನವಿಸಿಕೊಳ್ಳುತ್ತಿದ್ದೇನೆ.

ನಿಮ್ಮ ಕಚೇರಿಗೆ ತೆರಿಗೆಯನ್ನು ಕಟ್ಟಲು ಮೊನ್ನೆ ಮೊನ್ನೆ ಹೋಗಿದ್ದೆ. ಅಲ್ಲಿದ್ದ ಸಿಬ್ಬಂದಿಯವರು " ಸ್ವಾಮಿಾ ! ಕಾಫಿ ಹೊತ್ತಾಯಿತು. ಹೋಗಿ ಬರ್ತೇವೆ. ಇಲ್ಲೇ ಇರಿ. ನಾವು ಬಂದ ಮೇಲೆ ನಿಮ್ಮ ಕೆಲಸ ಏನು ಅಂತ ವಿಚಾರಿಸುತ್ತೇವೆ ಅಂದರು. ಕಾಫಿಗೆ ಹೋದವರು ಬರೋದು ಯಾವಾಗಲೋ, ಅವರ ಜತೆಗೆ ನಾನೂ ಹೋದರೆ, ಬೇಗ ಅವರನ್ನು ಕರೆದುಕೊಂಡು ಬರಬಹುದು ಎಂದು ಯೋಚಿಸಿ, ನಾನೂ ನಿಮ್ಮ ಜತೆ ಬರ್ತೀನಿ ಎಂದು ನಾನೇ ಮುಂದಾದೆ. ಅವರೂ ಒಪ್ಪಿಕೊಂಡರು. ಹೋಟಲಿಗೆ ಹೋಗಿ ಹೆಗ್ಗಣಗಳ ಹಾಗೆ ತಿಂದು ಬರುವಾಗ 'ಬಿಲ್ಲ'ನ್ನು ಆ ಮಾಣಿ ನನ್ನ ಕೈಲಿಟ್ಟ. ತೆರಿಗೆ ಮೇಲೆ ಇದೂ ಉಪತೆರಿಗೆ ಅಂತ ಅಂದುಕೊಂಡು ಆ ಹಣವನ್ನು ತೆತ್ತೆ. ಹಿಂದಿರುಗಿದ ಮೇಲೆ ನನ್ನ ಕೆಲಸವನ್ನು ಮುಗಿಸಿ, ಹಣಸಂದ ರಸೀದಿಯನ್ನು ಕೊಟ್ಟರು.

ಸಾಮಿಾ ! ನಿಮ್ಮ ಕಚೇರಿಯಲ್ಲಿ ಲೈಸೆನ್ಸ್‌ಗಾಗಲೀ ಇತರ ಅನುಕೂಲಗಳಿಗಾಗಲಿ ನಾವು ಬಂದಾಗ, ಹೆಗ್ಗಣಗಳ ಹೊಟ್ಟೆ ತುಂಬಿಸಿ, ನಂತರ ನಮ್ಮ ಬೇಡಿಕೆಗಳನ್ನು ಮುಂದಿಟ್ಟು ಅವರ ಕೈಲಿ ಅಸ್ತು ಎನ್ನಿಸಿಕೊಳ್ಳುವುದು ನ್ಯಾಯ. ಆದರೆ ಸ್ವಾಮಿಾ ! ನಾವೇ ಹಣ ಕೊಡಲು ಬಂದಾಗ, ಖುದ್ದಾಗಿ ಬಂದಾಗ, ಆ ಹಣ ತೆಗೆದುಕೊಳ್ಳುವುದಕ್ಕೂ ಕಾಣಿಕೆ ಕೊಡಬೇಕು ಎಂದರೆ, ಏನೋ ಕೊಳೆ ಹತ್ತಿದ ಹಾಗೆ ಆಗುತ್ತೆ. ಆದುದರಿಂದ ಮಾನ್ಯರೇ ! ನಿಮ್ಮ ಕಚೇರಿಯ ಹೆಗ್ಗಣಗಳಿಗೆ ಮೊದಲು ಪ್ರಾಯಶ್ಚಿತ್ತ ಮಾಡಿಸಬೇಕು. ಚೀಣಾಕ್ಕೆ ಬೇಕಾದರೂ ಕಳಿಸಿ ಅವುಗಳ Brain-wash ಮಾಡಿಸಬೇಕು. ಆಸ್ಪತ್ರೆಯ ವಾರ್ಡ್‌ಬಾಯ್ ಕೆಲಸ ಮಾಡೋನು ನಾನು. ಅಲ್ಲಿ ನನ್ನನ್ನು ಹೆಗ್ಗಣ ಅಂತಲೇ ಜನ ಕರೀತಾರೆ ಹಾಗಿರುವಾಗ ಒಂದು ಹೆಗ್ಗಣವನ್ನು ಇನ್ನೊಂದು ಹೆಗ್ಗಣ ಮುಕ್ಕೋದು ನ್ಯಾಯವೇ, ಸ್ವಾಮಿಾ. ಸ್ವಜನ ಭಕ್ಷಕ ಪ್ರಾಣಿಗಳು ಕೆಲವೇ ಕೆಲವು. ನಾಯಿಗಳು ಕೂಡ ತಮ್ಮತಮ್ಮನ್ನು ತಿನ್ನಲ್ಲ. ಈ ವಿಷಯವನ್ನು ಏಕೆ ವಿಶದಪಡಿಸುತ್ತಿದೀನಿ ಎಂದರೆ, ನಿಮ್ಮ ಹೆಗ್ಗಣಗಳು ಸ್ವಜನಭಕ್ಷಕರಾಗಿರುವುದರಿಂದ, ಪರಿಸ್ಥಿತಿಯನ್ನು ಹೀಗೆಯೇ ಬಿಟ್ಟರೆ, ಕಚೇರಿಗೆ ಕಚೇರಿಯನ್ನೆ ಒಂದು ದಿನ ಕೆಡವಿ ಬಿಡುತ್ತಾರೆ.

ಈ ವಿಷಯದಲ್ಲಿ ತಾವು ಆಗಿಂದಾಗ್ಗೆ ಬೌ ಬೌ ಅಂತ ಗಟ್ಟಿಯಾಗಿ ಬೊಗಳುತ್ತಾ ಎಚ್ಚರಿಕೆ ಕೊಟ್ಟಿರೆ. ನಗರ ನಿರ್ಮಲೀಕರಣವು ದೊಡ್ಡ ಹೆಜ್ಜೆ ಇಟ್ಟಂತಾಗುತ್ತದೆ.

ಇನ್ನು ಒಂದೇ ಒಂದು ಸಲಹೆ ಸ್ವಾಮಿಾ! ನಗರ ಸಭೆಯು ಇಟ್ಟಿಗೆ ಕಾರ್ಖಾನೆಯನ್ನು ಸ್ಥಾಪಿಸಿ ಹಣಗಳಿಸಬೇಕು ಎಂದು ಯೋಜನೆ ಮಾಡುತ್ತಾ ಇದೆಯಂತೆ. ಬಹಳ ಶ್ಲಾಘನೀಯವಾದ ಯೋಜನೆ. ಆದರೆ ಸ್ವಾಮಿನ್ ಅದಕ್ಕಿಂತ ಹೆಚ್ಚು ಉಪಕಾರಿಯಾದ ಯೋಜನೆ ಸ್ವಾನುಭವದಿಂದ ಹೊಳೆದಿದೆ.

ನಮ್ಮ ಮನೆ ಎದುರಿಗೆ ಒಂದು ವಠಾರವಿದೆ. ಎಂಟು ಸಂಸಾರಗಳು ಅಲ್ಲಿ ಮುತ್ತಿಕೊಂಡಿವೆ. ಒಂದೊಂದು ಸಂಸಾರದಲ್ಲಿ ಎಂಟೋ ಹತ್ತೋ ಮಕ್ಕಳುಗಳಿವೆ. ಅವೆಲ್ಲವೂ ಸರದಿ ಪ್ರಕಾರ. ಒಮ್ಮೊಮ್ಮೆ ಸಾಮೂಹಿಕವಾಗಿ, ಹಬ್ಬದ ದಿನ. ನಮ್ಮ ಮನೆ ಮುಂದೆ ಬೆಳಗಾಗುತ್ತಲೂ ಕೂತುಕೊಳ್ಳುತ್ತವೆ. ಲಾಗಾಯ್ತಿನಿಂದ ಬಂದ ವಾಡಿಕೆ. ನಮ್ಮ ಮನೆಯಲ್ಲಿ ಮಕ್ಕಳಿಲ್ಲ. ಹಾಗಾಗಿ ಸೇಡು ತೀರಿಸಿಕೊಳ್ಳುವ ಅವಕಾಶ ನಮಗಿಲ್ಲ. ಮುನಿಸಿಪಾಲಿಟಿ ತೋಟೀಗೆ ದಿನಾಗಲೂ ಲಂಚಕೊಟ್ಟು ನಮ್ಮೆದುರಿನ ಅವಲಕ್ಷಣವನ್ನು ಪರಿಹರಿಸಿಕೊಳ್ಳಬೇಕಾಗಿದೆ. ನಮ್ಮ ಕೇರಿಯ ಅಡ್ಡರಸ್ತೆಗಳಲ್ಲಿ ಕೂಡ ಇದೇ ಪರಿಸ್ಥಿತಿ.

ಸ್ವಾಮಿಾ! ನಿಮ್ಮ ಕಛೇರಿಯೇ ಹಂದಿಗಳನ್ನು ಸಾಕಿದರೆ ? ಕೇರಿಕೇರಿಗೆ ಹತ್ತು ಹತ್ತು ಹಂದಿಗಳನ್ನು ಬೆಳಗಾಗುತ್ತಲೂ ವಾಕಿಂಗ್‌ಗೆ ಕಳಿಸಿದರೆ. ರಸ್ತೆಗಳೂ ಸ್ವಚ್ಛಗೊಳ್ಳುತ್ತವೆ. ಹಂದಿಗಳೂ ಕೊಬ್ಬುತ್ತವೆ. ಕೊಬ್ಬಿದ ಹಂದಿಗಳನ್ನು ಹೊರದೇಶಗಳಿಗೆ ಕಳಿಸಿ ವಿದೇಶೀ ವಿನಿಮಯದ ಹಣವನ್ನು ಹೇರಳವಾಗಿ ಸಂಪಾದಿಸಬಹುದು. ಊರಿಗೆ ಊರೇ ಸ್ವಚ್ಛವಾಗುತ್ತದೆ. ಜಾತಿ ಹಂದಿಗಳನ್ನು ತರಿಸಿದರೆ, ಅವುಗಳ ಆಹಾರಕ್ಕಾಗಿ. ಸಾಕುವುದಕ್ಕಾಗಿ. ಏನೊಂದೂ ಖರ್ಚಿಲ್ಲ. ಮಾರಾಟಮಾಡಿದಾಗ ಹಣದ ಕೊಪ್ಪರಿಗೆಯೇ ಸಿಗುತ್ತೆ. ನಗರ ನಿರ್ಮಲೀಕರಣವೂ ಆಯಿತು. Foreign Exchange ಕೂಡ ಸಿಕ್ಕಿತು. ನಗರ ಸಭೆಯ ಆರ್ಥಿಕ ಸ್ಥಿತಿಯು ಕುಬೇರನ ಒಡ್ಡೋಲಗದಂತೆ ಆಗುತ್ತದೆ.

ನಮ್ಮ ಪುಣ್ಯಭೂಮಿಯಲ್ಲಿ ಭಗವಂತನೇ ಹಂದಿಯ ರೂಪು ಹೊತ್ತು ಅವತರಿಸಿ ಭೂಮಾತೆಯನ್ನು ಉದ್ಧರಿಸಿದ. ಅವನ ನಿದರ್ಶನವನ್ನು ಇಟ್ಟುಕೊಂಡು ತಾವು ವರಾಹಗಳನ್ನೂ ಸಾಕಿದರೆ, ನಗರಸಭೆಯ ಭಂಡಾರವು ವರಹಗಳಿಂದ ತುಂಬಿತುಳುಕುವುದರಲ್ಲಿ ಅನುಮಾನವೇ ಇಲ್ಲ.

ಅಲ್ಲಗಳೆಯಬೇಡಿ. ಸ್ವಾಮಿಾ! ನಮ್ಮನೆ ಎದುರಿಗೆ ಬೆಳಿಗ್ಗೆ ಎದ್ದೇಳುವ ಹಂದಿಯ ಆಹಾರದ ಗುಪ್ಪೆಗಳನ್ನು ನೋಡಿದರೆ, ಭೂಲೋಕಕ್ಕೇ ಸರಬರಾಜು ಮಾಡುವಷ್ಟು ಹಂದಿಗಳನ್ನು ನಾವು ಸುಲಭವಾಗಿ ಬೆಳೆಸಬಹುದು.

ಮಾನ್ಯ ನಗರಾಧ್ಯಕ್ಷರೇ! ಇಷ್ಟು ಹೊತ್ತಿಗೆ ನಿಮಗನ್ನಿಸಿರಬಹುದು, ನಮ್ಮಂತೆಯೇ ಅಲ್ಲವೇ ನೀವೂ! ಈ ತೆರನಾದ ಪತ್ರಿಕಾಲೇಖಕರ ವಕ್ರ ಬುದ್ಧಿಯನ್ನು

ಮೊದಲು ನೇರಗೊಳಿಸಿದರೆ ನಗರನಿರ್ಮೂಲಿಕರಣ ಆದಂತೆಯೇ ಅಂತ, ವಕ್ರ ಪುಂಡರಿರಬಹುದು. ಸ್ವಾಮಿ, ನಾವೂ ಆದರೆ ಮಹಾಕಾಯರೂ ಹೌದು. ಸೂರ್ಯ ಕೋಟಿ ಸಮಪ್ರಭರೇನೂ ಅಲ್ಲದಿದ್ದರೂ. ಕತ್ತಲಲ್ಲಿ ಕಾಣುವ ಕಣ್ಣುಗಳನ್ನು ಬೆಳೆಸಿಕೊಂಡಿದ್ದೇವೆ.

ನಮ್ಮ ಮನಸ್ಸು ನೇರವಾಗಿ ಹೋಗುವಂತೆ ಮಾಡಲು ಪ್ರಯತ್ನಿಸಿದ ಆ ದೇವ ದೇವನೇ, ಆ ಮೂರು ಲೋಕಗಳ ಒಡೆಯನೇ ಬೇಸ್ತು ಬಿದ್ದು ಸುಸ್ತಾಗಿ ವಿಫಲ ಹೊಂದಿದ ಮೇಲೆ, ಬರೀ ಮನುಷ್ಯನಿದನ್ನು ಸಾಧಿಸಲು ಸಾಧ್ಯವೇ !

ನಗರದಲ್ಲಿ ಇದೊಂದು ಕೊಳೆ ಇರಲಿ, ಸ್ವಾಮಿ. ಚೆಂದುಟಿಯ ಹಾಲುಗಲ್ಲದ ನವ ಸುಂದರ ತರುಣಿಯ ಮುಖದ ಮೇಲೆ ದೃಷ್ಟಿ ಬಟ್ಟು ಇದ್ದಂತೆ ನಗರದ ಸ್ವಚ್ಛ ಶುದ್ಧ ಮುಖದ ಮೇಲೆ. ಈ ದೃಷ್ಟಿ ಬಟ್ಟು ಇರಲಿ. ಸ್ವಾಮಿ!

ಎಂತೆಂದಿಗೂ ನಿಮ್ಮ ಸಹಚರಿ,

ಬಚ್ಚು



“ ಅಯ್ಯೋ ! ನಾನು ದಾಸರು ಬಂದ್ರು ಅಂದೆ ಅಷ್ಟೆ ”

ಮರೆವಿನ ಮನೆಯಾತ

ಬರೆದವರು :
ಟಿ. ಸುನಂದಮ್ಮ

ಅವರಕ್ಕ ಹೇಳಿದ್ದರು ನನ್ನ ಕೂಡ ಮದುವೆಗೆ ಮುಂಚೆ, ಮಾಧು ಚಿನ್ನದಂಥ ಹುಡುಗ ಕಣಮ್ಮ. ಆದರೆ ಒಂದೇ ಒಂದು ಕೊರತೆ–ಬಲು ಮರವು ಅವನಿಗೆ ಎಂದು. ಆಕೆ, ಇವರು ಪೂನಾದಲ್ಲಿ ಓದುತ್ತಿದ್ದಾಗ, ಬೇಸಿಗೆ ಬಿಸಿಲಿಗೆ ತಮ್ಮ ಬಾಯಾರುತ್ತಾನೆಂದು, ತಮ್ಮದೊಂದು ತಿರುಪಿನ ತಂಬಿಗೆಯಲ್ಲಿ ನೀರು ತುಂಬಿ ಕೈಗಿಟ್ಟು. "ರೈಲಿನಲ್ಲಿ ಮರೆತೀಯೇ. ನಮ್ಮತ್ತೆಮ್ಮನೋರದು ಇದು ; ಮುಂದಿನ ಸಾರಿ ಬಂದಾಗ ತಪ್ಪದೆ ಹಿಂದಕ್ಕೆ ತಂದು ಕೊಡಪ್ಪ" ಎಂದು ಹೇಳಿ ಕಳಿಸಿದ್ದರಂತೆ. ಮುಂದಿನ ಸಾರಿ ಬಂದಾಗ. ನೀನು ತಿರುಪಿನ ತಂಬಿಗೆ ಕೊಟ್ಟಿದ್ದೆಯಾ ಎಂದರಂತೆ ತವಮ್ಮಾಜಿ, ಅತ್ತೆಮ್ಮನ ಕೈಲಿ ಇನ್ನೂ ಕುಕ್ಕಿಸಿಕೊಳ್ಳುತ್ತಿರುವ ಆಕೆ, ಪಾಪ ನನಗೆ ಎಚ್ಚರ ಕೊಟ್ಟಳು. ನಾನೆಂದುಕೊಂಡೆ. ಒಳ್ಳೇದೇ ಆಯ್ತು ಮನೆ ಖರ್ಚಿಗೆ ಕೊಟ್ಟ ಹಣದ ಲೆಖ್ಖ ಕೇಳೋದೇ ಮರೆತಾರು " ಎಂದು. ಆದರೂ, ಮದುವೆಯಾದ ಹೊಸತರಲ್ಲಿ, ನನ್ನನ್ನಿವರು ಸಿನಿಮಾಕ್ಕೆ ಕರೆದೊಯ್ದವರು. ಮುಗಿದಮೇಲೆ ನನ್ನಿರವನ್ನೇ ಮರೆತು ದಾಪುಗಾಲು ಹಾಕಿಕೊಂಡು ಮನೆಗೆ ಹೊರಟು ಹೋದದ್ದು, ಹೊಸ ಊರಲ್ಲಿ ದಾರಿ ತಿಳಿಯದೆ ಕಂಡವರನ್ನು ಕೇಳಿ ನಾನು ಮನೆ ತಲುಪಿದ್ದು — ಇನ್ನೊಂದು ದಿನ ಮಳೆ ಬಂದಾಗ ಕೊಡೆ ಬಿಚ್ಚಿ ತಮ್ಮೊಬ್ಬರ ತಲೆಗೇ ಹಿಡಿದು ಹೋಗುತ್ತಿದ್ದಾಗ. ಹಿಂದೆ ಬರುತ್ತಿದ್ದ ಪುಣ್ಯಾತ್ಮರಾರೋ ನನೀತಿದಾರಲ್ಲ ಸಾರ್ ನಿಮ್ಮನೆಯೋರು ? " ಅಂದಾಗ, ಜ್ಞಾಪಿಸಿಕೊಂಡು ನನ್ನ ತಲೆಯನ್ನೂ ತಮ್ಮ ಕೊಡೆಯೊಳಕ್ಕೆ ತೂರಿಸಿದ್ದು—ಇವು ನಾನು ಮರೆಯಲಾಗದ ಅವಮಾನ ಪ್ರಸಂಗಗಳು.

ಆದರೆ, ಈಚೆಗೆ ಅವರದು ವಿಚಿತ್ರ ಮರವೆ ಆಗಿದೆ—ಬೇಕಾದ್ದು ಮರೆಯುತ್ತೆ. ಬೇಡದ್ದು ನೆನಪಿರುತ್ತೆ.

ಮೊನ್ನೆ ನಮ್ಮ ಸೋದರ ಮಾವ ಬಂದಿದ್ದರು, ಮದರಾಸಿಂದ ಅಬ್ಬ, ಅವರೆದುರಿಗೆ ಇವರ ಜ್ಞಾನ ಭಂಡಾರ ಬರಿದೇ ಆಗಲೊಲ್ಲದು —ಮುಂದ್ರಾ ನಿಸ್ತ ಲಕ್ಷಕ್ಕೆ ಸಿಕ್ಕಿಕೊಂಡ. ಸೈರಾಬಾನು ತಾತನ ಹೆಸರೇನು. ಮಾಲಾಸಿನ್ಹಳ ತಾಯಿಯ ಕುಲಗೋತ್ರಗಳ್ಯಾವುವು ಪ್ಲ್ಯಾಮಿಯನ್ ಪ್ರೊಫೆಸರ್ ಫ್ರೆಡ್‌ಹಾಯಿಲ್‌ನ ವಯಸ್ಸೆಷ್ಟು. ಜಯಂತ್ ವಿಷ್ಣು ನಾರ್ಳೀಕರ್ ಹುಟ್ಟಿದ ಊರಾವುದು (ಅವರ ಮೊಳ ಉದ್ದ ಹೆಸರುಗಳದೂ ಅಚ್ಚಳಿಯದ ನೆನಪು ನಮ್ಮವರಿಗೆ). ವೈಜಯಂತಿ ಮಾಲಳ ವಾರ್ಷಿಕ ಆದಾಯ. ರಾಜಕಪೂರನಲ್ಲಿ ಸಿಕ್ಕ ಕಪ್ಪುಹಣದ ಲೆಕ್ಕಾಚಾರ—ಒಂದೇ ಎರಡೇ. ಇವರಿಗೆ ತಿಳಿದಿದ್ದ ವಿಷಯಗಳು ರಾಕೆಟ್ಟಿನ ಓಟದಂತೆ ಸಾಗಿತ್ತು. ಇವರ ಜೋರು ಭಾಷಣ ಮಾವ—ಬಹುಶಃ ಬೇಸರದಿಂದ ಮಾತು ಬದಲಾಯಿಸಲೆಂ

ದೇನೋ— ಅಂದಹಾಗೇ, ನಿನ್ನ ಮಗ ಮುರುಳಿ ಎಲ್ಲೂಸ್ಪ ಕಾಣಲೇ ಇಲ್ಲ ..ಈಗ ವನು ಏನು ಓದ್ತಿರೋದು —ಅಂತ ಬಾಯಿ ಹಾಕಿದರು. ಇವರು, ಹ...ಹ .. ಮುರುಳೀನೇ ಕ್ಲಾಸ್‌ಗೆ ಹೋಗಿರಬೇಕು ...ಅವನೀಗ, ಎಸ್ಸೆಸ್ಸೆಲ್ಸಿ ..ಓ ಓ ..” ಎಂದರು ಮುರುಳಿ ಓದುತ್ತಿರುವುದು ಹೈಸ್ಕೂಲ್ ಫಸ್ಟ್ ಇಯರ್. ಜ್ವರ ಬಂದು ಮುಲುಕುತ್ತ ಮಲಗಿ ಮೂರು ದಿನವಾಗಿತ್ತು, ಪ್ರಣ್ಯಕ್ಕೆ. ಮಾವ ಅವನು ಮಲಗಿದ್ದ ಹಜಾರದೊಳಕ್ಕೆ ಬರಲಿಲ್ಲ.

ಇವರು ಕಾಲೇಜಿನಲ್ಲಿ ಲೈಬ್ರೇರಿಯನ್ ಯಾರು ಎಷ್ಟು ಹೊತ್ನಲ್ಲಿ ಯಾವ ಪುಸ್ತಕ ಕೇಳಲಿ. ಕಣ್ಣು ಮುಚ್ಕೊಂಡು ತೆಕ್ಕೊಟ್ಟುಬಿಡ್ತೀನಿ” ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ .ಅದೇ, ಗೌರೀ ಹಬ್ಬದ ದಿನ ನಾನು ನನ್ನ ನಾದಿನಿಗೆ ಮೊರದ ಜೊತೆ ಕೊಡಲು ಹೋಗಿದ್ದಾಗ ಇವರಿಗೆ ಮಾಡಿಟ್ಟ ಕಾಫಿಗೆ ಸಕ್ಕರೆ ಹಾಕಿರಲಿಲ್ಲವಂತೆ. ಏಳು ವರ್ಷ ಸಂಸಾರ ಜರುಗಿಸಿರುವ ಮನೆಯಾತ ಮಹಾರಾಯರು, ಮನೆಯಲ್ಲಿ ಸಕ್ಕರೆ ಡಬ್ಬ ಎಲ್ಲಿರುತ್ತೆ ಅನ್ನುವುದು ತಿಳಿಯದೆ ಸಕ್ಕರೆಯಿಲ್ಲದ ಕಾಫಿಯನ್ನೇ ಕುಡಿದಿದ್ದರು.

“ ನನ್ನ ಸ್ನೇಹಿತ ರಂಗು ಇಲ್ವೇ—ಶೃಂಗೇರಿ ಅಮಲ್ದಾರ,—ಅವನ ತಂಗೀ ಮದುವೆಯಂತೆ ಸೋಮವಾರ. ನಾನು ಊರಲ್ಲಿರಲ್ಲ, ಮೈಸೂರಿಗೆ ಮೀಟಿಂಗಿಗೆ ಹೋಗಬೇಕು—ನೀನು ಹೋಗಿ ಬಿಟ್ಟು ಬಾ ಎಂದರು. ನಾನು ಅವರ ಮನೆಯವ ರನ್ನಾರನ್ನೂ ನೋಡಿಲ್ಲವಾದ್ದರಿಂದ ಅನುಮಾನಿಸಿದ್ದೆ. “ಚಿಂತಿಲ್ಲ ಶಾಂತೂ, ರಂಗು ಇವತ್ತು ಕಾಲೇಜ್‌ಗೇ ಫೋನ್ ಮಾಡಿದ್ದ ಮನೆಯೋರ‍್ನಾದರೂ ಖಂಡಿತ ಕಳಿಸು. ಅಂತ. ಹೋಗಿ ಬಾ ಪ್ಲೀಸ್ ” ಅಂತ ಗೋಗರೆದರು. ಮನಸ್ಸಿಲ್ಲದಿದ್ದರೂ ಒಪ್ಪಿದೆ. “ ಅಂದ ಹಾಗೆ ಎಲ್ಲಿ ಮದುವೆ ?”...“ ಆ ..ಸಜ್ಜನರಾಯರ ಛತ್ರಾಂತ ಕಾಣುತ್ತೆ ಅಲ್ಲ ಅಲ್ಲ. .ಕೋಟಾ ವಿಜಯಲಕ್ಷ್ಮಿ...ಅಲ್ಲ ಅಲ್ಲ ಸಜ್ಜನರಾಯರ ಛತ್ರ...

ನನಗೆ ಕೋಪ ಬಂತು. “ಲಗ್ನಪತ್ರಿಕೇನಾದರೂ ತರಬಾರದಿತ್ತೇ ಎಂದೆ. “ಮರೆತು ಎಲ್ಲೋ ಹಾಕಿಬಿಟ್ಟೆ .ಚೆನ್ನಾಗಿ ನೆನಪಿದೆ ಸಜ್ಜನರಾಯರ ಛತ್ರ ಅಂತ.

ಸೋಮವಾರ ಮದುವೆಗೆ ಹೋದೆ. ಯಥಾಪ್ರಕಾರ, ಬಾಗಿಲಲ್ಲಿ ಅರಿಶಿನ ಕುಂಕುಮದ ಸಿಪಾಯಿನಿಗಳ ಸಾಲು, ಸಂಗೀತದಾರ್ಭಟ. ನನಗೋ ಒಬ್ಬರೂ ಗುರುತಿಲ್ಲ. ಇವರ ಗೆಳೆಯ ರಂಗಸ್ವಾಮಿಗಳೂ ಎಲ್ಲೊ ಆ ಗದ್ದಲದಲ್ಲಿ ಕಾಣಿಸಲೇ ಇಲ್ಲ. ಒಬ್ಬಾಕೆ —ರೇಷ್ಮೆ ನೋಡಿ ಗಂಡಿನ ತಾಯಿಯೆಂದು ತೀರ್ಮಾನಿಸಿದೆ—ನನ್ನ ಮುಖ ನೋಡಿ. ಮೂತಿ ತಿರುಗಿಸಿ ಹೊರಟು ಹೋದಳು, ಇನ್ನೊಬ್ಬಳು—ಹೆಣ್ಣು ಹೆತ್ತಮ್ಮನ ಬೇಸ್ತು ಕಳೆ ಹೊತ್ತ ಮುಖದಾಕೆ—ನನ್ನನ್ನೇ ಕೆಕ್ಕರಿಸಿ ನೋಡುತ್ತ, “ಲೇ ಸಾತೂ. ಲೇ ಪಾತೂ ಬರೋರ‍್ನ ಸರಿಯಾಗಿ ನೋಡ್ತಿರಿ: ಕಂಗಾಳಿಗಳ ಕಾಟ ಹೆಚ್ಚಾಗಿದೆ. ಕಾಯಿನಾಸೆಗೆ ಕರೆದೋರಿಗಿಂತ ಹೆಚ್ಚಾಗಿ ಥಳಕು ಘಳಕು ಮಾಡ್ಕೊಂಡು ಬರುತ್ವೆ —ಎಂದು ನನ್ನ ಕಿವಿಯ ಬಳಿ ಕೂಗಿದಳು. ಅದೇ ಮುಖದ ಮತ್ತೊಬ್ಬಳು

—ಆಕೆಯ ತಂಗಿಯೇನೋ ಬರೀ ಕಾಯ್ನಲ್ಲೇ ಮುಕ್ತಾಯವಾದರೆ ಸಾಕಾಗಿದೆ, ಹುಡುಗರ ಮೈ ಮೇಲಿನ ಒಡವೆಗಳ ತಂಟೆಗೆ ಬರದೆ, ಅಂದಳು...ಕೈಗಿಟ್ಟ ಕಾಯಿ ಚೀಲ ಹೊತ್ತು ಬೆವರುತ್ತ ಹೊರಕ್ಕೆ ಬಂದೆ.

ನಡುಗುವ ಕಾಲುಗಳಿಗೆ ಬಸ್ಸೇ ಗತಿಯೆಂದು ಬಸ್‌ಸ್ಟಾಪಿಗೆ ಬಂದು ನಿಂತೆ. ಹಾಗೇ ಹಿಂದಕ್ಕೆ ತಿರುಗಿ ನೋಡಿದಾಗ, ಕೋಟಾ ವಿಜಯಲಕ್ಷ್ಮಿ ಛತ್ರದ ಬಾಗಿಲಲ್ಲಿ ಅಮಲ್ದಾರ್ ರಂಗಸ್ವಾಮಿಗಳು ಅತಿಥಿಗಳನ್ನು ನಗುಮುಖದಿಂದ ಎದುರುಗೊಳ್ಳುತ್ತ ನಿಂತಿದ್ದರು

ಊರಿಗೆ ಬಂದ ಇವರನ್ನು ತಗುಲಿಕೊಂಡೆ ... ನಾನೇನು ಮಾಡಲಿ ಶಾಂತೂ ಜ್ಞಾಪಕ ಇಟ್ಟುಕೊಳ್ಳಬೇಕೂಂತ, ಖೋಟಾ—ಸಾಚಾ ಖೋಟಾ—ಸಾಚಾ ಅಂತ ಹತ್ತು ಸಾರಿ ಜಪಿಸಿ. ರಂಗು ಮದುವೇಲಿ ನನಗೆ ಖೋಟಾ ರೇಷ್ಮೆ ಶಲ್ಯ ಉಡುಗೆರೆ ಕೊಟ್ಟಿದ್ದರು—ಆದರಿಂದ ಕೋಟಾ ಛತ್ರದಲ್ಲಿ ಮದುವೆ ಅನ್ನೋದನ್ನ ನೆನಪಿಟ್ಕೊಳ್ಳೋದು ಸುಲಭ —ಅಂತ ಇಷ್ಟೆಲ್ಲ ಪ್ರಯತ್ನ ನಡೆಸಿದ್ದೆ. ಆದರೂ ಹಾಳು ಮರವೆ ಬಂದರೆ ಏನು ಮಾಡಲಿ ಹೇಳು ಎಂದು ಪಶ್ಚಾತ್ತಾಪ ಪಡುತ್ತಿದ್ದಾರೆ. ಪಾಪ.

ಚರಿತ್ರೆಯ ಪ್ರಾಧ್ಯಾಪಕರು ವಿಶ್ರಾಂತಿವೇತನ ಪಡೆದರಂತೆ.

—ಚರಿತ್ರೆ ಮರುಕಳಿಸಬಹುದು, ಆದರೆ ಪ್ರಾಧ್ಯಾಪಕರಲ್ಲ.

*　　　*　　　*　　　*

ಈ ಸಾರಿ ಗಾಂಧಿ ಜಯಂತಿಯನ್ನು ದೇಶದಾದ್ಯಂತ ಹಿಂದಿಯಲ್ಲೇ ಆಚರಿಸಬೇಕು ಎಂದು ಉತ್ತರರಾಷ್ಟ್ರರ ಅಂಬೋಣವಂತೆ.

—ಗುಜರಾತಿನವರು ಮಾತೃಭಾಷೆಯೇ ಪವಿತ್ರ. ಹಿಂದಿ ಕೂಡದು ಅಂದರಂತೆ.

*　　　*　　　*　　　*

ಭಾರಿ ದೂರದರ್ಶಿಕ ಯಂತ್ರವೊಂದನ್ನು ಸ್ಥಾಪಿಸಲಾಗುವುದಂತೆ. ವೈಜ್ಞಾನಿಕರು ಮೊದಲಿಗಿಂತ ಎರಡರಷ್ಟು ದೂರ ನೋಡಲು ಸಾಧ್ಯವಂತೆ.

—ಅಕ್ಕಿ ಬೆಲೆ ಇಳಿಯೋದು ಇವರುಗಳಿಗೆ ಮೊದಲು ಕಾಣಿಸಬಹುದು. ಆಗ ನಮಗೆ ಎಚ್ಚರಿಕೆ ಕೊಡುತ್ತಾರೆ ಎಂಬ ಭರವಸೆ ನಮಗಿದೆ.

*　　　*　　　*　　　*

ಅವರ ಯೋಗ್ಯತೆ ತೋರಿಸುಕ್ಕೆ

★

"ನಮ್ಮ ಹೆಡ್ ಮಾಸ್ತರು ತುಂಬಾ ಒಳ್ಳೆಯವರಪ್ಪ ಯೋಗ್ಯತೆ ನೋಡಿ, ಬಡವ ಅನ್ನೋದನ್ನ ಖಂಡಿತ ಮಾಡಿಕೊಂಡು ಫ್ರೀಷಿಪ್ ಹಂಚಿದಾರಪ್ಪ. ಆ ಮಂತ್ರಿಗಳ ಜವಾನ ಕೇಳಿದ. ಈ ಪುಡಾರಿಗಳ ಷಡ್ಡಕ ಶಿಫಾರಸು ಮಾಡಿದ ಅಂತ ಯಾವ ಹುಡುಗರಿಗೂ ಅನ್ಯಾಯ ಮಾಡುಕ್ಕೆ ಹೋಗುಲ್ಲ ಎಂದು ನೆಲಮಂಗಲದ ಸೀನಿ, ರಾಮಮ್ಮೈಯ್ಯನಿಗೆ ಹೇಳಿದ.

ಸೀನಿ, ರಾಮಮ್ಮೈಯ್ಯ ಇಬ್ಬರೂ ಹೈಸ್ಕೂಲು ಮೂರನೇ ವರ್ಷದ ತರಗತಿ. ಯಲ್ಲಿ ಓದುತ್ತಿದ್ದರು. ಸ್ಕೂಲಿನ ಫುಟ್‌ಬಾಲ್ ಟೀಮಿನಲ್ಲಿ ಇಬ್ಬರೂ ಆಡ್ತಾ ಇದ್ದರು. ಒಂದೇ ಕ್ಲಾಸು ಒಂದೇ ಬೆಂಚು. ಹಾಗಾಗಿ ಗಳಸ್ಯಕಂಠಸ್ಯ ಸೀನೀಗೆ ಫ್ರೀಷಿಪ್ ಸಿಕ್ಕಾಗ ರಾಮಮ್ಮೈಯ್ಯನಿಗೆ ಅರ್ಧ ಫ್ರೀಷಿಪ್ ಸಿಕ್ಕಿತ್ತು. ಹಿಂದಿನ ಪರೀಕ್ಷೆ ಯಲ್ಲಿ ಸೀನೀಗೆ ೮೦ ನಂಬರು ಬಂದಿತ್ತು. ರಾಮಮ್ಮೈಯ್ಯನಿಗೆ ೪೦ ನಂಬರು ಬಂದಿತ್ತು. ಸೀನಿ ತಂದೆ ಹಳ್ಳಿ ಶಾನುಭೋಗ ರಾಮಮ್ಮೈಯ್ಯನ ತಂದೆ ಪೇಟೆ ಹೋಟ ಲಿಟ್ಟಿದ್ದ. ಈ ಎಲ್ಲ ಕಾರಣಗಳಿಂದ ಸೀನಿ ಮನಸ್ಸಿನಲ್ಲಿ ಹೆಡ್‌ಮಾಸ್ತರು ಫ್ರೀಷಿಪ್, ಅರ್ಧ ಫ್ರೀಷಿಪ್ ಹಂಚಿದ್ದು ನ್ಯಾಯ ಅನ್ನಿಸಿತ್ತು.

ಒಂದು ಮಾತಾಡಿದರೆ ಮೂರು ಮರು ಮಾತಾಡೋ ಸ್ವಭಾವ ರಾಮಮ್ಮೈಯ್ಯ ನದು. ಹಾಗಿದ್ದರೂ ಕೂಡ ಹೆಡ್ ಮಾಸ್ತರನ್ನು ಸೀನಿ ಹೊಗಳಿದಾಗ ರಾಮಮ್ಮೈಯ್ಯ ಸುಮ್ಮನೆ ಇದ್ದುಬಿಟ್ಟ. ಓ ಎಂದರೆ ತೋ ಎನ್ನುವ ಏತಾಂಡವಾದವನ್ನು ಮ್ಮೈಯ್ಯ ಹೂಡಲೇ ಇಲ್ಲ. ಅದರ ಬದಲು.

"ಹೇಗೂ ಅರ್ಧ ಫ್ರೀಷಿಪ್ ಬಂದಿದೆ. ನಮ್ಮಪ್ಪನಿಗೆ ಹೇಳೋದೇ ಇಲ್ಲ. ಮಿಗುವ ಆ ದುಡ್ಡಿನಲ್ಲಿ ನಮ್ಮಪ್ಪನ ಹೋಟಲಿನಲ್ಲೆ ನಿನಗೆ ತಿಂಡಿ ಕೊಡಿಸ್ತೀನಿ, ಬಾ ಎಂದು ಕರೆದ. "ಬೇಡಪ್ಪಾ ದಮ್ಮೈಯ್ಯ, ನೀನಿವತ್ತು ತಿಂಡಿ ಕೊಡಿಸಿದರೆ, ಮುಂದೆ ನಾನು ಕೊಡಿಸಬೇಕಾಗುತ್ತೆ. ನಾನು ಕೇವಲ ಬಡವ ಎಂದು ಸೀನಿ ಎಷ್ಟು ಹೇಳಿದರೂ ಕೇಳದೆ, ರಾಮಮ್ಮೈಯ್ಯ ಬಲವಂತ ಮಾಡಿ ಕರೆದುಕೊಂಡು ಹೋದ. ಇದೇನು ಪೀಟೀಗೆ ಪೀಟಿ ಮಾಡೋ ವಿಚಾರವೇನೋ ಎಂದು ಸಮಾಧಾನ ಹೇಳುತ್ತಾ.

ತಕ್ಕಮಟ್ಟಿಗೆ ಇಬ್ಬರೂ ತಿಂದರು. ಒಂದೂ ಮುಕ್ಕಾಲು ರೂಪಾಯಿಯಷ್ಟು ತಿಂದರು. ಹೊರಗೆ ಬರೋವಾಗ ಹೋಟಲ ಗಲ್ಲದ ಬಳಿ ಕುಳಿತಿದ್ದ ನಕ್ಷತ್ರೀಕ ಸೀನೀನ ಹಿಡಿದ. ಒಂದೂ ಮುಕ್ಕಾಲು ಅಂತ ಮಾಣಿ ಒಳಗಿನಿಂದ ಕೂಗಿದ. ಆ ವೇಳೆಗೆ ಮ್ಮೈಯ್ಯ ಮುಂದೆ ನಡೆದುಹೋಗಿ ಬಿಟ್ಟಿದ್ದ. ಸಂಕಟಪಟ್ಟುಕೊಂಡು, ಗಲಭೆ ಎದುರಿ ಸಲು ನಾಚಿಕೊಂಡು ಸೀನಿ ದುಡ್ಡು ತೆತ್ತು ಹೊರಗೆ ಬಂದ.

ದೂರದಲ್ಲಿ ಮೈಯ್ಯ ನಿಂತಿದ್ದ. ಹೋಗಿ ಅವನಿಗೆ ನಾಲ್ಕು ತಪರಾಕು ಹಾಕೋಣ ಅಂತ ಸೀನಿಗೆ ಅತಿ ಆಸೆ ಆಯಿತು. ಆದರೆ ಮೈಯ್ಯ ದಢೂತಿ ಹುಡುಗ. ಅಲ್ಲದೆ ರಸ್ತೇಲಿ ಜಗಳ ಕಾಯೋದು ಅನಾಗರಿಕತೆಯ ಕುರುಹು. ಅಂತಹ ಜಗಳವೆಲ್ಲಾ ರಾಜಕಾರಣಿಗಳಿಗೆ ಮೀಸಲು. ಮರ್ಯಾದಸ್ಥರು ಮಾಡೋ ಹಗರಣವಲ್ಲ ಎಂದುಕೊಂಡು ಸೀನಿ ತನ್ನ ಹಾಸ್ಟಲಿಗೆ ಹೋದ.

ಮಾರನೇ ದಿನ ಮೈಯ್ಯ ಕೂತಿದ್ದ ಬೆಂಚಿನಮೇಲೆ ಸೀನಿ ಕೂತುಕೊಳ್ಳಲೇ ಇಲ್ಲ. ಅವನ ಕಡೆಗೂ ತಿರುಗಿ ನೋಡಲಿಲ್ಲ. ವಿರಾಮಕಾಲ ಬಂದಾಗ ಮೈಯ್ಯ ಮೇಲೆ ಬಿದ್ದುಕೊಂಡು ಹೋಗಿ " ಯಾಕೋ ಕೋಪ ನಿನಗೆ ಫುಲ್ ಫ್ರೀಷಿಪ್ ಬಂದಿತ್ತು. ತಿಂಡಿ ಕೊಡಿಸು ಅಂದರೆ ಕೊಡಿಸ್ತಾ ಇರಲಿಲ್ಲ. ಆದಕ್ಕೇ ಒಂದು ಉಪಾಯ ಹೂಡಿದೆ. ಅಷ್ಟಕ್ಕೆ ನನ್ನ ಸಂಗ ಬಿಟ್ಟುಬಿಡೋದೇನೋ ನಾನು ಮಾಡಿದ್ದು ನ್ಯಾಯ ಅಲ್ಲ ವೇನೋ ಎಂದು ಗೋಗರೆದ.

" ನೀನೋ, ನಿನ್ನ ನ್ಯಾಯವೋ ನಿನ್ನ ಸಹವಾಸವೇ ಬೇಡ ಎಂದು ಸೀನಿ ಒದರಿಕೊಂಡು ಹೊರಡಲೆತ್ನಿಸಿದ.

ಮೈಯ್ಯ ಅವನ ಅಂಗೀನ ಬಲವಾಗಿ ಹಿಡಿದು ನಮ್ಮ ಹೆಡ್ ಮಾಸ್ತರು ಸತ್ಯ ಸಂದರು. ನ್ಯಾಯ ಮೂರುತಿ ಅಂತ ಅಂದೆಯಲ್ಲಪ್ಪಾ ಅವರನ್ನೇ ಕೇಳೋಣ. ಅವರು ಕೊಟ್ಟ ತೀರ್ಪಿಗೆ ಒಪ್ಪುತೀಯಾ ಎಂದ.

ಹೆಡ್‌ಮಾಸ್ತರ ಕೈಲಿ ಮೈಯ್ಯನ್ನ ಉಗಿಸೋಣ ಅಂತ ಸೀನೀಗೆ ಅನ್ನಿಸಿತು ಆಗಲಿ ಎಂದ. ಇಬ್ಬರೂ ಹೆಡ್ ಮಾಸ್ತರ ಕೊಟಡಿಗೆ ಹೋದರು. ರಾಮುಮೈಯ್ಯನೇ ವಿಷಯವನ್ನು ಹೇಳಿದ ನಾನು ಮಾಡಿದ್ದು ನ್ಯಾಯ ಅಲ್ಲವೆ ಸಾರ್ ಎಂದು ಕೇಳಿದ.

" ಜಾಣ ಹುಡುಗ ಕಣಯ್ಯ. ರಾಮುಮೈಯ್ಯ ನೀನು ಮಾಡಿದ್ದು ನ್ಯಾಯ" ಎಂದು ಹೆಡ್‌ಮಾಸ್ತರು ತೀರ್ಪು ಕೊಟ್ಟರು

ಸೀನಿ ಮುಖ ಇಳಿದು ಹೋಯಿತು ಠೇವಣಾತಿ ಕಳೆದುಕೊಂಡ ರಾಜಕಾರಣಿ ಯಂತೆ ಪೆಚ್ಚು ಮುಖ ಜೋಲಿಳಿಸಿಕೊಂಡು ಹೊರಕ್ಕೆ ಬಂದ. ಹಿಂದೆಯೇ ರಾಮು ಮೈಯ್ಯನೂ ಬಂದ.

ಹೊರಗೆ ಬಂದಮೇಲೆ ಒಂದೂ ಮುಕ್ಕಾಲು ರೂಪಾಯಿಗಳನ್ನು ರಾಮುಮೈಯ್ಯ ಸೀನಿ ಕೈಯ್ಯಲ್ಲಿಟ್ಟ. ಆಶ್ಚರ್ಯದಿಂದ ಸೀನಿ "ಮತ್ತೆ ನೀನ್ಯಾಕೆ ಯಾಕೆ ಹೀಗೆ ಮಾಡಿದೆ" ಎಂದು ಕೇಳಿದ.

ಹೆಡ್ ಮಾಸ್ತರು ನ್ಯಾಯಸ್ಥರು ಅಂತ ಅವತ್ತು ಹೊಗಳಿದೆಯಲ್ಲಾ ಅವರ ನ್ಯಾಯವಾದ ಯೋಗ್ಯತೆ ತಿಳಿಸೋಕ್ಕೆ ಹೀಗೆ ಮಾಡಿದೆ ಅವರು ನಮ್ಮ ಹೋಟಲಿನಲ್ಲಿ ತಿಂದು ತಿಂದು ನನ್ನ ಹೆಸರು ಹೇಳಿ ಹೊರಕ್ಕೆ ಹೋಗುವ ವಾಡಿಕೆ ಎಂದ.

ಒಂದು ಹೊಸ ಗಾದೆ

ಬರೆದವರು :
ರಾಮಿ

ಮೊದಲೇ ನಮ್ಮಲ್ಲಿ ಗಾದೆಗಳಿಗೇನು ಬರಗಾಲವಿಲ್ಲ. ಕೆಲವರ ಮಾತಿನ ಕಟ್ಟಡಕ್ಕೆ ಗಾದೆಗಳೇ ಇಟ್ಟಿಗೆ ಗಾರೆ. ಹೆಜ್ಜೆಗೊಂದು ಗಾದೆ ಅವರಲ್ಲಿ ದಾಸ್ತಾನಿರುತ್ತದೆ. ನಮ್ಮ ಗುಳ್ಳಾಚಾರಿ ಅಂಥವರಲ್ಲೊಬ್ಬ. ಮೊನ್ನೆ ಕ್ಲಬ್ಬಿನಲ್ಲಿ ಪೇಪರೋದುತ್ತಿದವನು ಇದ್ದಕ್ಕಿದ್ದಂತೆ ಮಂತ್ರಿ ರೇಗಿದರೂ ಮುನಾಫೆಯೇ ಎಂದು ಹೊಸ ಗಾದೆಯೊಂದನ್ನು ತೂರಿದ.

ಇನ್ನೊಬ್ಬರು ಆ ಗಾದೆಯನ್ನು ಮಂತ್ರಿ ರೇಗಿದರೆ ಏನು ಕೆಟ್ಟಿತು, ಸಾವಿರ M O. ಬಂತು ಎಂದು ತಿದ್ದಿದಾಗಲೇ ಆ ಗಾದೆ ಯಾಕೆ ಹುಟ್ಟಿಕೊಂಡಿತೆಂದು ನಮಗೆ ಅರ್ಥವಾದದ್ದು.

ಒರಿಸ್ಸಾ ಮುಖ್ಯ ಮಂತ್ರಿ ಬೀರೇನ್ ಮಿತ್ರರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ ತುಂಬ ದುಡ್ಡು ಮಾಡಿ ಮನೆ ಮಠ ಕೊಂಡಿದ್ದೀರಿ ಅಂತ ಅಸೆಂಬ್ಲೀಲಿ ಸದಸ್ಯರು ಹೇಳಿದರಲ್ಲ, ಆಗ ಮಿತ್ರರಿಗೆ ಬಲು ರೇಗಿ ಅವರು ಆರೋಪ ಹೊರಿಸಿದವರಿಗೇ ಒಂದು ಸವಾಲು ಹಾಕಿದದರು. ಒಂದೇ ಒಂದು ರೂಪಾಯಿ ಕೊಟ್ಟವರಿಗೆ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಬಿಟ್ಟುಕೊಡುತ್ತೇನೆಂದರು.

ರಾಜ್ಯದ ಮುಖ್ಯ ಮಂತ್ರಿಯ ಆಸ್ತಿಪಾಸ್ತಿ ಕೇವಲ ಒಂದು ರೂಪಾಯಿಗೆ ದಕ್ಕುವುದಿದ್ದರೆ ಯಾಕೆ ಬಿಡಬೇಕು ಎನ್ನಿಸಿತು ಹಲವರಿಗೆ. ಮೊದಲೇ ನಾವು ಎಂಥವರಂತ ಗೊತ್ತಿದೆಯಲ್ಲ. ಜಲಂಧರದ ಕಂಪೆನಿಯವರು ಒಂದು ರೂಪಾಯಿ ಐವತ್ತನಯೇ ಪೈಸೆಗಳಿಗೆ ಒಂದು ರೇಡಿಯೋ ಕೊಡುತ್ತೇವೆಂದು ಒಂದೆಂಟು ಜಾಹೀರಾತು ಕೊಟ್ಟರೆ, ಕಾರ್ಡು ಬರೆದ್ದು ಹಾಕಿ ವಿ. ಪಿ. ಪಡೆಯುವವರು ನಮ್ಮಲ್ಲಿದ್ದಾರೆ. ಅಂದ ಮೇಲೆ ಮುಖ್ಯ ಮಂತ್ರಿಯ ಆಸ್ತಿಪಾಸ್ತಿ ಒಂದು ರೂಪಾಯಿಗೆ ಹಲವರು ಒಂದೊಂದು ರೂಪಾಯಿಯ M. O. ಕಳುಹಿಸುವಂಥವರಾದರು. ಭುವನೇಶ್ವರಕ್ಕೆ ಸಾವಿರಾರು M. O. ಗಳು ಬಂದುವಂತೆ. ಆದರೆ ಮಂತ್ರಿ ಆಗ ಏನು ಮಾಡಬೇಕು ಇಷ್ಟು ಮಂದಿ ಉಮೇದ್ವಾರರಿರುತ್ತ ಯಾರ ಒಂದು ರೂಪಾಯಿ ಪಡೆಯೋದು.

ಆಗ ಬೀಳುತ್ತಾ ಇದ್ದ ಮಂತ್ರಿ ತನ್ನದೇ ಒಂದು ವರಸೆ ತೆಗೆದ. ಒಂದು ರೂಪಾಯಿಗೆ ಕೊಡಲು ಸಿದ್ಧನೇ. ಏನನ್ನು ಸಾಲಮೂಲಗಳನ್ನು ಸಾಲಕ್ಕೆ ಏರ್ಪಾಡು ಮಾಡಿದವರಿಗೆ ಮೂಲದ ಮೇಲೆ ತುಳಸಿದಳ ಇಟ್ಟು ನೀರೆರೆಯುತ್ತೇನೆ ಅನ್ನೋಕೆ

ಪತ್ರಿದ ಆತ. ಎಲಾ ಎಲಾ ಇದೇನಿದು ಎಂದು ಕಕ್ಕಾಬಿಕ್ಕಿಯಾದರು. M. O ಕಳುಹಿಸಿದ ಮಂದಿ. ಮಂತ್ರಿ ಯಾಕೋ ಆರಾಮವಾಗಿ ಹೇಳುವುದನ್ನು ನೋಡಿದರೆ ಮೂಲಕ್ಕಿಂತ ಸಾಲವೇ ಬಲವಾಗಿದೆಯೋ ಎಂಬ ಸಂಶಯಕ್ಕೆ ಅವಕಾಶವಾಯಿತು. ಆದ್ದರಿಂದ ಪೋಸ್ಟಾಫೀಸಿನವರು ನಡುವೆ ಕಬಳಿಸಿದ ಹದಿನೈದು ಪೈಸೆ ಹೋದದ್ದು ಹೋಗಲಿ ಒಂದು ರೂಪಾಯಿಯಾದರೂ ಹಿಂದೆ ಬರಲಿ ಎಂದು ಹಾತೊರೆದರು. ನಮ್ಮ ಗುಳ್ಳಾಚಾರಿಯಂಥವರು

ಆದರೆ ನನಗೇನೋ ಕಾಣಿಸುತ್ತದೆ. ಮಂತ್ರಿಯ ಸಾಲ ದೊಡ್ಡದಿದ್ದು ಮೂಲ ಸ್ವಲ್ಪ ಚಿಕ್ಕದಿದ್ದರೂ ಚಿಂತೆಯಿಲ್ಲ. ಮಂತ್ರಿ ಮಾಜಿಯಾಗದೆ ಉಳಿದಿರುವವರೆಗೆ, ಕೊನೆ ಪಕ್ಷ ಆತ ಅಸೆಂಬ್ಲಿ ಸದಸ್ಯನಾಗಿಯಾದರೂ ಉಳಿದಿರುವವರೆಗೆ ಆತನ ಮೂಲ ಚಿಕ್ಕದಿದ್ದರೂ ಅದಕ್ಕೆ ಅಕ್ಷಯ ಪಾತ್ರೆಯ ಲಕ್ಷಣವಿರುತ್ತದೆ. ಆದ್ದರಿಂದ ಒಂದು ರೂಪಾಯಿ ಕೊಟ್ಟು ಸಾಲ ಮೂಲ ಪಡೆಸಿಕೊಂಡಾತ ಸಾಲದಲ್ಲಿ ಮುಳುಗದ ಹಾಗೆ ಮಂತ್ರಿ ನೋಡಿಕೊಂಡಾನು ಎನಿಸಿತು. ಹಾಗಂತ ಒಂದು ರೂ. M. O ಮಾಡಲು ನಾನು ರೂಪಾಯಿ ಹುಡುಕಿದೆ. ನನ್ನ ಸಾಲ ಮೂಲ ಮಂತ್ರಿಯದೇ ಸಮಾಚಾರ ಅನ್ನಿ ಮೂಲ ಹುಡುಕಿದರೆ ದೇವರ ಡಬ್ಬಿಯಲ್ಲಿ ಮಾತ್ರ ಸಿಕ್ಕಿತು. M O. ಕಳುಹಿಸುವುದರಲ್ಲಿದ್ದೆ. ಅಷ್ಟರಲ್ಲಿ ಮಂತ್ರಿಗಳು ಮಾಜಿಯಾದ ಸುದ್ದಿ ಬಂತು. ಆತ ಆ ಸಂಕಟದಲ್ಲಿ ಪೋಸ್ಟಾಫೀಸಿನಲ್ಲಿ ಕೊಳೆಯುತ್ತಿರುವ M. O. ಗಳಿಗೆಲ್ಲ ಸಹಿ ಹಾಕಿ ಹಣ ಪಡೆದು ತೆಪ್ಪಗೆ ಕುಳಿತರೇನು ಗತಿ ಅಂತ ನಾನು ಸುಮ್ಮನಾದೆ.

ಸಾಲದ್ದಕ್ಕೆ ಗುಳ್ಳಾಚಾರಿ ಬೇರೆ ಹೇಳುತ್ತಿರುತ್ತಾನೆ—ಮಂತ್ರಿ ಬಿದ್ದರೂ ಒಂದು ವರಸೆಯೇ ಅಂತ ಹೊಸ ಗಾದೆಯನ್ನ.

ನಿನ್ನ ಹೆಸರೋ ಕೈರಾನ್ ಪ್ರತಾಪ
'ದಾಸ' ನಾಮವ ಕೇಳಿ ನಿನಗೇಕೆ ಕೋಪ
ಧವಳ ಟೋಪಿಯ ಗೃಧ್ರಗಳ ಪಾಪಕೂಪ
ನೀನೊಬ್ಬನೇ ಸಿಕ್ಕಿದೆಯಾ, ಅಯ್ಯೋಪಾಪ

*   *   *   *

ಪಂಜಾಬನಾಳ್ವಾಗ ಪಂಚಾಮೃತವ ಸವಿದಂತೆ ।
'ದಾಸ್' ವರದಿ ಬರಲ್ ಪಕ್ಕೆಲಬು Punch ಆದಂತೆ ಲಂಚಜ್ಞ ॥

ನರ್ಲೀಕರ್-ಪಾಪ !

ಪಚ್ಚೆ, ರತ್ನ, ವೈಢೂರ್ಯಗಳನ್ನು ತಕ್ಕಡೀಲಿ ತೂಗಿ ಸಂತೇಲಿ ಮಾರುತ್ತಿದ್ದರಂತೆ ವಿಜಯ ನಗರದ ಹೊನ್ನ ದಿನಗಳಲ್ಲಿ. ಆಗೊಮ್ಮೆ ಕೃಷ್ಣದೇವರಾಯ ಒಡ್ಡೋಲಗದಲ್ಲಿ ದರ್ಬಾರ್ ನಡೆಸಿದಾಗ, ವೀಣೆ ರಾಮಪ್ಪ ಬಲು ಹಿತವಾಗಿ ವೀಣೆ ನುಡಿಸಿದನಂತೆ. ಬಹಳ ಖುಷಿ ಹೊಂದಿದ ಅರಸ "ಬಾಲಂ" ಸಂಸ್ಥಾನವನ್ನು ವೀಣೆ ರಾಮಪ್ಪನಿಗೆ ಜಹಗೀರಿಯಾಗಿ ಕೊಟ್ಟನಂತೆ. ಈಗಿನ ಮಂಜರಾಬಾದ್ ಆಗಿರುವ ಆಗಿನ ಬಾಲಂ ಸಂಸ್ಥಾನವು ವರ್ಷಕ್ಕೆ ಮೂರು ಲಕ್ಷ ಪಗೋಡಾಗಳಷ್ಟು ವರಮಾನವನ್ನೂ ದುಡಿಯುತ್ತಿತ್ತಂತೆ. ಒಂದೆರಡು ವರ್ಷ ಬಾಲಂ ಸಂಸ್ಥಾನದಲ್ಲಿ ಆಧಿಪತ್ಯ ನಡೆಸಿದ ವೀಣೆ ರಾಮಪ್ಪ. ಅಷ್ಟರಲ್ಲಿ ಆವನಿಗೆ ಮನದಟ್ಟಾಯಿತು. ಈ ಅಧಿಕಾರ ಚಲಾಯಿಸೋದು ನನ್ನಿಂದ ಸಾಧ್ಯವಲ್ಲ. ಏನಿದ್ದರೂ ವೀಣೆ ನುಡಿಸೋದೇ ನನ್ನ ಯೋಗ್ಯತೆ ಎಂದು. ಜಾಣ ಅವನು. ಹಿಂದಿರುಗಿ ಬಂದು ಅರಸನ ಹತ್ತಿರ ಹೇಳಿದನಂತೆ ಮಹಾ ಪ್ರಭೋ ನಿಮ್ಮ ಸಂಸ್ಥಾನ ನೀವೇ ತೊಗೊಳ್ಳಿ. ಈ ಎರಡು ವರ್ಷಗಳಿಂದ ವೀಣೆ ನುಡಿಸೋದೂ ಮರೆತು ಹೋಗಿದೆ. ಅದನ್ನೇ ಭದ್ರಮಾಡಿಕೊಂಡು ಹಾಯಾಗಿ ಬಾಳ್ತೀನಿ ಅಂತ.

ಯಾಕೆ ಹೇಳುಕ್ಕೆ ಬಂದೆ ಅಂದರೆ, ನಮ್ಮ ಜಯಂತ್ ನರ್ಲೀಕರ್ ಗುರುವಿನ ಜತೆಗೆ ಲಂಡನ್ನಿನಲ್ಲಿ ವೈಜ್ಞಾನಿಕ ಪವಾಡ ಒಂದನ್ನು ಸಾಧಿಸಿದ. ಹಠಾತ್ತಾಗಿ ಲೋಕ ಪ್ರಸಿದ್ಧನಾದ. ತೊಗೋ ನಮ್ಮ ಆಳರಸರು " ಬಾ ನರ್ಲೀಕರ್. ನೀನು ಹೇಳಿದ ವೈಜ್ಞಾನಿಕ ಸಂಸ್ಥಾನವನ್ನು ಬಳುವಳಿಯಾಗಿ ನಿನಗೆ ಕೊಡುತ್ತೇವೆ. ಅಲ್ಲಿ ಅರಸೊತ್ತಿಗೆಯನ್ನು ಅಲಂಕರಿಸು ಎಂದು ಕೇಳಿಕೊಂಡರು.

ವೈಜ್ಞಾನಿಕ ಪವಾಡಕ್ಕೆ ಮುಖ್ಯವಾಗಿ ಬೇಕಾದದ್ದು ಚುರುಕಾದ ಮನಸ್ಸು. ಮನಸ್ಸು ಚುರುಕಾಗಬೇಕಾದರೆ, ಚುರುಕಾದ ಮನಸ್ಸಿನೊಂದಿಗೆ ತಿಕ್ಕಾಡಬೇಕು. ಅದಾದಮೇಲೆ ಮಿಕ್ಕ ಸಲಕರಣೆಗಳು, ಮಿಕ್ಕ ಅನುಕೂಲಗಳು, ಸಮಾನ ಧರ್ಮವಿರುವವರು, ಸಮಾನ ಚುರುಕು ಬುದ್ಧಿಯಿದ್ದವರು ಜತೆಯಲ್ಲಿರದೇ ಇದ್ದರೆ ಎಷ್ಟೇ ಸಲಕರಣೆಗಳಿರಲಿ, ಎಂತದೇ ಜಹಗೀರಿ ಕೊಡಲಿ, ಎಂತಹ ಪ್ರಚಂಡನೇ ಆದರೂ ತುಕ್ಕು ಹಿಡಿದು ಹೋಗುವ ಪ್ರಮೇಯ ಒದಗುತ್ತದೆ.

ಮಸಲಾ ನಮ್ಮ ಜಯಂತ್, ವೈಜ್ಞಾನಿಕ ಜಹಗೀರನ್ನು ಮೆಚ್ಚಿ ಬಂದುಬಿಟ್ಟ ಅನ್ನಿ. ಇಲ್ಲಿನ ವೈಜ್ಞಾನಿಕ ಪ್ರಪಂಚದಲ್ಲಿ, ಹಳೇ ಹೆಗ್ಗಣಗಳಿವೆ. ಹೆಸರು ಸಂಪಾದಿಸಿದ ಹೆಗ್ಗಣಗಳು. ಈ ಹೆಗ್ಗಣಗಳು ಕಬ್ಬಿಣವನ್ನೇ ತುಂಡರಿಸುವ ಛಾತಿಯನ್ನು ಹೊಂದಿವೆ. ಇನ್ನೂ ಕೆಲವು ಬಣ್ಣಬಣ್ಣದ ಓತಿಕ್ಯಾತಗಳಿವೆ. ದೂರದಲ್ಲಿ ಟೋಪಿ ನೋಡಿದರೆ ಹ್ಞೂ ಹ್ಞೂ ಅಂತ ತಲೆಯಾಡಿಸುತ್ತವೆ. ಹಾಗೆ ಆಡಿಸಿ ಆಡಿಸಿ ಬಾಳಿ ಬದುಕುತ್ತಿವೆ. ಇನ್ನೂ ಕೆಲವು ನರಿಗಳಿವೆ. ಹಿಂದೆ ಹಿಂದೆಯೇ ಸುತ್ತುತ್ತಾ, ಸಮಯ

ನೋಡಿ ಕೈಕಚ್ಚುವ ಜಾಣತನ ಹೊಂದಿರುತ್ತವೆ. ಮತ್ತು ಕೆಲವು ದೊಡ್ಡ ದೊಡ್ಡ ಹದ್ದುಗಳಿವೆ. ಮೇಲೆ ಹಾರಾಡುತ್ತಲೇ ಇರುತ್ತವೆ. ಸಾಯೋಹಾಗೆ ಆದ ಅಂದರೆ ಸಾಕು. ಹಾರಿ ಬಂದು ಇನ್ನೂ ಬದುಕಿರುವಾಗಲೇ ಹರಿದು ಕಿತ್ತು ತಿನ್ನುತ್ತವೆ.

ಇಂತಹ ವೈಜ್ಞಾನಿಕ ಜಹಗೀರಿಯನ್ನು ಪಡೆದು ನರ್ಲೀಕರ್, ಪಾಪ, ದಾರಿ ತಪ್ಪಿ ಇಲ್ಲಿಗೆ ಮೋಹದಿಂದ ಬಂದರೆ, ಅವನ ಇಡೀ ಭಾವೀ ಆಯುಷ್ಯವೆಲ್ಲಾ, ಹೆಗ್ಗಣ ಓತಿಕ್ಯಾತ, ನರಿ, ಹದ್ದು, ಇವುಗಳ ಶಿಕಾರಿಯಲ್ಲೇ ಮುಕ್ತಾಯವಾಗುತ್ತದೆ. ಅದರ ಬದಲು ಇದ್ದಲ್ಲೇ ಇದ್ದುಕೊಂಡು, ಚುರುಕು ಬುದ್ಧಿಯಿದ್ದವರ ಜತೆಯಲ್ಲಿ ವಿಜ್ಞಾನವೇ ತಪಸ್ಸು ಎಂದೆನ್ನುವ ಋಷಿಗಳ ಜತೆಯಲ್ಲಿ ಬಾಳಿ ಬದುಕಿದರೆ ಅವನಿಗೂ ಶ್ರೇಯಸ್ಸು, ವೈಜ್ಞಾನಿಕ ಪ್ರಗತಿಗೂ ಅನುಕೂಲ.

ಇಲ್ಲದೆ ದೊಡ್ಡ ಹುದ್ದೆ ಅಂತ ಇಲ್ಲಿಗೆ ಎಡವಿಬಿದ್ದರೆ, ವೀಣೆ ರಾಮಪ್ಪನ ತರಹಾನೇ ಆಗುತ್ತೆ.

ಅದರ ಬದಲು ನಮ್ಮ ಘನ ಸರ್ಕಾರದವರು, ಇದ್ದಲ್ಲೇ ಕೆಲಸ ಮಾಡಿಕೊ ನಿನ್ನ ಖರ್ಚನ್ನೆಲ್ಲಾ ನಾವು ವಹಿಸಿಕೊಳ್ಳುತ್ತೇವೆ ಭಾರತದ ವೈಜ್ಞಾನಿಕ ನಿಪುಣ ಅಂತ ಸನ್ಮಾನಿಸಿ ಆ ಖರ್ಚನ್ನು ಕೊಡುತ್ತೇವೆ ಎಂದರೆ, ಅವನಿಗೂ ಚೆನ್ನ, ನಮ್ಮ ದೇಶಕ್ಕೆ ಒಂದು ಹೆಸರಾದರೂ ಉಳಿಯುತ್ತೆ. ವೈಜ್ಞಾನಿಕ ಪ್ರಗತಿ ಎಲ್ಲಾದರೂ ಮಾನವನ ಹಿತಕ್ಕೆ ಎಂದೆನ್ನುವ ಅಷ್ಟು ದೊಡ್ಡ ಬುದ್ಧಿ, ವಿಶಾಲಬುದ್ಧಿ, ನಮ್ಮ ದೇಶ ಅಂತ ಸುತ್ತಲೂ ಬೇಲಿ ಹಾಕಿಕೊಂಡು ಮೆರೆಯುವ ನಮ್ಮ ನಾಯಕರಿಗೆ, ಹೇಗೆ ಬಂದೀತು.

ಮಲೇರಿಯಾ ಮರುಕಳಿಸಿದ ಹಾಗೆ, ವೀಣೆ ರಾಮಪ್ಪನ ಜೀವನವೇ ಜಯಂತ್ ನರ್ಲೀಕರ್‌ಗೂ ಬಡಿಯುತ್ತೇನೋ. ಮುಸಲಾ ಹಾಗೆ ಬಡಿದರೂ ಬೇಗ ಜಯಂತ್ ಎಚ್ಚರಗೊಂಡು ವೀಣೆ ರಾಮಪ್ಪನ ತರಹ ಹಿಂತಿರುಗಿ ಹೋಗಿ ತಪಸ್ವಿಯಾಗಲಿ ಎಂದೇ ಕೊರವಂಜಿಯ ಹಾರೈಕೆ.

ಖಾಸಗಿ ಕಂಪೆನಿಗಳು ಹೀಗೆ ಹೀಗೆ, ಈ ಬಂಧನಗಳಲ್ಲೇ ಕೆಲಸ ಮಾಡಬೇಕು ಎಂದು ಸರ್ಕಾರದವರು ಕಾನೂನು ರಂಗೋಲಿಯನ್ನು ಸುತ್ತಲೂ ಹಾಕಿ, ದಿಗ್ಬಂಧನೆ ಮಾಡಿದ್ದಾರಂತೆ.

—ಆಗಲೇ ಕಂಪೆನಿಯವರು ರಂಗೋಲಿ ಕೆಳಗೆ ನುಸುಳುವ ಉಪಾಯಗಳನ್ನು ಕಂಡುಹಿಡಿದುಬಿಟ್ಟಿದ್ದಾರಂತೆ.

* * * *

★ ★ ಪಥ್ಯದ ಪರಿಣಾಮ ★ ★

ಚೌ ಚೌ, ಮದ್ದೂರು ವಡೆ, ಖಾರಾ ಬೂಂದಿ, ಓಂಪುಡಿ, ಬಾಳೇಕಾಯಿ ಬಜೆ, ನಾನು—ಒಂದು ಮೇಜಿನ ಸುತ್ತ ಕುಳಿತು, ನಮ್ಮ ವಿರಾಟಭವನದ ಆರಾಮಕೋಣೆಯ ಪೂರ್ವ ದಿಕ್ಕಿನಲ್ಲಿ, ಪರಶುವಿನ ಪರಿಚಾರಿಕೆಗಾಗಿ ಕಾದಿದ್ದೆವು. ಮಲ್ಹಾರಿರಾಯರು ನಮಗೆಲ್ಲರಿಗಿಂತಲೂ ಕೆಲವು ನಿಮಿಷಗಳ ಮುಂದೆಯೇ ಬಂದಿದ್ದು, ಈಶಾನ್ಯದಿಕ್ಕಿನಲ್ಲಿ ಆಗಲೇ ತಮ್ಮ ಖಾರದ ಗೋಡಂಬಿಯಲ್ಲಿ ಐದಾರು ಚೂರುಗಳನ್ನು ಅನುಭವಿಸಿದ್ದರು. ಅದೇ ಸಮಯದಲ್ಲಿ ನಮ್ಮ ವಿರಾಟಭವನದ ಕೆಂಪು ಬೆಕ್ಕು. ಇದ್ದಕ್ಕಿದ್ದ ಹಾಗೆಯೇ ಉಪ್ಪರಿಗೆಯ ಮೆಟ್ಟಲುಗಳ ಮೇಲೆ, ಮೇಲಿಂದ ಕೆಳಗೆ ಉರುಳಿಕೊಂಡು ಬಂದು, ಒಂದು ಬಾರಿ ಸುತ್ತಲೂ ನೋಡಿ, ನಮ್ಮನ್ನು ಶಪಿಸಿ, ಮೈ ಕೊಡವಿಕೊಂಡು, ಅಡುಗೆಯ ಮನೆ ಕಡೆ ಓಡಿತು.

" ಪ್ರಾಯಶಃ ಎಡವಿರಬೇಕು. " ಅಂದರು ಓಂಪುಡಿ.

" ಛೆ ! ಬೆಕ್ಕು ಎಂದಿಗೂ ಎಡವೊಲ್ಲ. ಆ ಪ್ರಾರಬ್ಧ ಕರ್ಮವೆಲ್ಲಾ ನಮ್ಮ ಮನುಷ್ಯ ಜಾತಿಗೇ ಅಂಟಿಕೊಂಡಿರೋದು. ಈಗ ಏನಿದ್ದರೂ ಪ್ರಾಯಶಃ ಒಂದು ಇಲಿ ಪ್ರಾಯಶಃ ಹೆಣ್ಣಿಲಿ ಇರಬೇಕು. ಈ ಬೆಕ್ಕಿನಿಂದ ತಲೆ ತಪ್ಪಿಸಿಕೊಂಡಿರಬೇಕು. " ಅಂದರು ಖಾರಾ ಬೂಂದಿ.

ನಮ್ಮ ವಿರಾಟ ಭವನದಲ್ಲಿ ಚರ್ಚೆಗಳು ಆಗಾಗ ಈ ರೀತಿ ಉನ್ನತ ಮಟ್ಟವನ್ನು ಮುಟ್ಟುವುದುಂಟು.

ಪರುಶು ನಮ್ಮ ಮಾಮೂಲುಗಳನ್ನು ನಮ್ಮ ಮುಂದೆ ತಂದಿಟ್ಟ.

" ಏನ್ರಿ ನೀವು ಹೇಳೋದು ? ಬೆಕ್ಕಿಗೆ ಇಲಿ ಬೇಟೆಯಲ್ಲಿ ಅಪಘಾತವೇ ? ನನಗೆ ಎಂದಾದರೂ ಬಾಳೇಕಾಯಿ ಬಜೆ ಗಂಟಲಲ್ಲಿ ಸಿಕ್ಕಿಕೊಂಡು ಅಪಘಾತವಾಗುತ್ತೆ ?" ಅನ್ನುತ್ತಾ ಬಾಳೇಕಾಯಿ ಬಜೆ, ಒಂದು ಬಾಳೇಕಾಯಿ ಬಜೆಯನ್ನು ಅನಾಮತ್ತಾಗಿ ಬಾಯಿಗೆ ತುರುಕಿಕೊಂಡು, ತೇಲುಗಣ್ಣು ಮೇಲುಗಣ್ಣು ಮಾಡಿ, ಕೆಮ್ಮಿ, ಒಂದು ಲೋಟ ನೀರು ಕುಡಿದು ಶಾಂತವಾಗಿ ನಮ್ಮ ಕಡೆ ನೋಡಿದರು.

ಪರುಶು ಬೆಕ್ಕಿನ ಅಪಘಾತದ ಕಾರಣ ತಿಳಿಸಿದ.

" ನಮ್ಮ ಮಾಲೀಕರು ರಂಭೇನ ಮೇಲಿಂದ ಒದ್ದರು. ರಂಭೆ ಅವರ ಮಂಚದಡೀಲಿ ಸೇರಿಕೊಂಡು ಇಲಿ ಬೇಟೆ ಮಾಡ್ತಾ ಗಲಾಟೆಮಾಡಿತಂತೆ. ಅದಕ್ಕೇ ರೇಗಿ ಒದ್ದರು. "

ನನಗೆ ತಿಳಿದ ಹಾಗೆ ವಿರಾಟ ಭವನದ ಮಾಲೀಕರು ಗಣೇಶರಾಯರು ತುಂಬಾ ಸಾಧುವಾದ ಮನುಷ್ಯ. ಒಂದು ಇರುವೆಯನ್ನು ಕೂಡ ತುಳಿದು ಕೊಂದವರಲ್ಲ. ನಮ್ಮೆಗೆಲ್ಲರಿಗೂ ಆಶ್ಚರ್ಯವಾಯ್ತು.

" ಈಗ್ಯೆ ಒಂದು ವಾರದಿಂದ ಗಣೇಶರಾಯರು ಪಥ್ಯದಲ್ಲಿದ್ದಾರೆ. ಬೆಳಿಗ್ಯೆ, ಮಧ್ಯಾಹ್ನ, ಸಂಜೆ, ರಾತ್ರಿ ಕೇವಲ ಹುರಿನುಚ್ಚಿನ ಗಂಜಿ. ಅದಕ್ಕೆ ಸಕ್ಕರೆಯೂ ಇಲ್ಲ. ಉಪ್ಪೂ ಇಲ್ಲ. " ಅಂದ ಪರುಶು.

" ಅಯ್ಯೋ ಪಾಪ ! " ಅಂದೆವು ನಾವೆಲ್ಲರೂ ಏಕ ಕಂಠದಿಂದ.

" ಅಯ್ಯೋ ಪಾಪ ಅನ್ನುವುದು ಸುಲಭ. ಆದರೆ ಪಥ್ಯದ ಯಾತನೆಯನ್ನು ಅನುಭವಿಸುವುದು ಕಷ್ಟ !"

ಮಲ್ಹಾರಿರಾಯರ ಅಧಿಕಾರ ವಾಣಿಯನ್ನು ಕೇಳಿ ನಾವೆಲ್ಲ ಈಶಾನ್ಯ ದಿಕ್ಕಿಗೆ ತಿರುಗಿದೆವು.

" ನನ್ನ ಭಾವಮೈದುನನ ಮಗ ಏಕಾಂಬರ..."

" ಅಂದರೆ 'ವಿರಹಪ್ರಲಾಪ'ದ ಉಜ್ವಲಕುಮಾರನಲ್ಲವೇ?"

ಖಾರಾ ಬೂಂದಿಯ ಈ ಪ್ರಶ್ನೆಗೆ ಮಲ್ಹಾರಿರಾಯರು ಚಕಿತರಾದರು.

" ಸಾಕ್ಷಾತ್ ಅವನೆ ! ಆದರೆ ನಮ್ಮ ಏಕಾಂಬರ ಉಜ್ವಲಕುಮಾರನಾದ ಸಂಗತಿ ನಿಮಗೆ ಹೇಗೆ ಗೊತ್ತು ?"

ಓಹೋ—ನೀವೇ ಹಿಂದೆ ಹೇಳಿದ್ದಿರಲ್ಲ !

ಹಾಗಿದ್ದಮೇಲೆ ಅನುಕೂಲವೇ ಆಯ್ತು. ಇವತ್ತು ನಾನು ಅವನ ವಿಚಾರ ವನ್ನೇ ಹೇಳಲು ಶುರುಮಾಡಿದ್ದೆ.

ಅಂದರೆ—ಏಕಾಂಬರ ಇದೇ ರೀತಿ ಬೆಕ್ಕನ್ನು ಒದ್ದನೆ ? ಬಾಳೇಕಾಯಿ ಬಜಿ ಕೇಳಿದರು.

ಏಕಾಂಬರನಿಗೆ ಈ ರೀತಿ ಬೆಕ್ಕು ಒದೆಯಲಿಕ್ಕೆ ಸಿಕ್ಕಿರಲಾರದು ಅಷ್ಟೆ. ಸಿಕ್ಕಿದ್ದರೆ ಆ ಬೆಕ್ಕಿನ ಗತಿ ಏನಾಗುತ್ತಿತ್ತೋ ನಾನು ಕಲ್ಪನೆ ಕೂಡ ಮಾಡಲಾರೆ. ಇದೇ ಏಕಾಂಬರನ ಮುತ್ತಜ್ಜ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಮೂರು ದಿನಗಳ ಉಪವಾಸವಿದ್ದೂ ಸಹ ನಲವತ್ತೇಳು ಫರಂಗಿಯವರನ್ನ ಆಹುತಿ ತೆಗೆದುಕೊಂಡ ಮೇಲೆ ಮಡಿದರು. ಆದರೆ ಏಕಾಂಬರ ಒಬ್ಬ ವೈದ್ಯನ ಪಥ್ಯಕ್ಕೆ ಕಟ್ಟು ಬಿದ್ದು ನಮ್ಮ ಸಮಾಜದ ಹತೋಟಿಯಿಂದಲೇ ತಪ್ಪಿಸಿಕೊಳ್ಳುವಷ್ಟಕ್ಕೆ ಬಂದಿದ್ದ.

ಅಯ್ಯೋ ಪಾಪ ! ಅಂದೆವು ಎಲ್ಲರೂ.

ನನ್ನ ಭಾವಮೈದುನನ ಮಗ ಏಕಾಂಬರ (ಮಲ್ಹಾರಿರಾಯರು ಹೇಳಿದರು) ನಿಮಗೆ ತಿಳಿದ ಹಾಗೆ ಪ್ರಸಿದ್ಧ ಸಿನಿಮಾ ನಟನಾದ. ಬೇಕಾದ ಹಾಗೆ ಸಂಪತ್ತು,

ಅಂತಸ್ತು, ಗೌರವ ಇರುವಾಗ ಒಂಟಿ ಮನುಷ್ಯನ ಜೀವನ ಕೇಳಬೇಕೆ ? ಏಕಾಂಬರ ಬೇಕಾದ್ದನ್ನು ಬೇಕಾದ ಹಾಗೆ ಬೇಕಾದಾಗ ತಿಂದು ಕುಡಿದು ತೇಗಿದ. ಅವನಿಗೆ ತನ್ನ ಚಿಕ್ಕಂದಿನ ಬಾಳ್ವೆಯ ಹುಣ್ಣುಗಳೆಲ್ಲಾ ವಾಸಿಯಾದವು.. ಆದರೆ ಆ ಹುಣ್ಣು ಗಳು ವಾಸಿಯಾಗುವ ಹೊತ್ತಿಗೆ ಏಕಾಂಬರನಿಗೆ ಬೇರೆ ಕಡೆ ಹುಣ್ಣುಗಳಿದ್ದವು— ಜಠರದಲ್ಲಿ. ಒಂದೊಂದು ದಿನ ಅವುಗಳ ವೇದನೆ ಎಷ್ಟು ಇರುತ್ತಿತ್ತೆಂದರೆ, ತನಗೆ ಏನೂ ಮಾಡಲಿಕ್ಕೆ ತೋರದೆ ಒಂದು ದೊಡ್ಡ ಗುಂಡುಕಲ್ಲಿಗೆ ಒಂದು ಇಡೀ ಪಂಚೆ ಸುತ್ತಿ ಅದನ್ನು ತನ್ನ ಹೊಟ್ಟೆಗೆ ಬಿಗಿದು ಕಟ್ಟಿಕೊಳ್ಳುತ್ತಿದ್ದನಂತೆ ! ಈ ರೀತಿ ಸ್ವಲ್ಪ ದಿನಗಳು ಕಳೆದ ಮೇಲೆ ಒಬ್ಬ ಪ್ರಸಿದ್ಧ ವೈದ್ಯರ ಹತ್ತಿರ, ತನ್ನ ಡೈರೆಕ್ಟರ್ **H. M D C.** ಹಂಸರಾಜರ ಪ್ರೇರಣೆಯಿಂದ, ಏಕಾಂಬರ ಹೋದ.

ಬೆಳಿಗ್ಯೆ ಆರು ಘಂಟೆಗೆ ಒಂದು ಲೋಟ ಹಾಲು.
ಪುನಃ ಹತ್ತು ಘಂಟೆಗೆ ಒಂದು ಲೋಟ ಹಾಲು.
ಮಧ್ಯಾಹ್ನ ಒಂದು ಗಂಟೆಗೆ ಒಂದು ಲೋಟ ಹಾಲು.
ಸಂಜೆ ಆರು ಘಂಟೆಗೆ ಒಂದು ಲೋಟ ಹಾಲು.
ರಾತ್ರಿ ಹತ್ತು ಗಂಟೆಗೆ ಒಂದು ಲೋಟ ಹಾಲು.
ಜೊತೆಗೆ ಕೆಲವು ಮಾತ್ರೆಗಳು ಇದು ಏಕಾಂಬರನ ಚಿಕಿತ್ಸೆಯಾಯ್ತು.

" ಊಟ ಯಾವಾಗ ಮಾಡಲಿ ಡಾಕ್ಟ್ರೆ ? " ಏಕಾಂಬರ ಕೇಳಿದ.

"ಊಟ ಇನ್ನೆಲ್ಲಿಯ ಊಟ ? ಊಟದ ಸಮಯದಲ್ಲಿ ಬೇಕಾದರೆ ಧಾರಾಳ ವಾಗಿ ಒಂದು ಲೋಟ...ಹೂ ! ಹಾಲು ಕುಡಿಯಿರಿ." ಅಂದರು ಡಾಕ್ಟರು.

" ದೋಸೆ, ಇಡ್ಲಿ ? "

" ಛೆ ! ಎಲ್ಲಾದರುಂಟೆ? ಅದಕ್ಕೆ ಬದಲಾಗಿ ದಿವ್ಯನಾಗಿ ಒಂದು ಲೋಟ ಹಾಲು ಕುಡಿಯಿರಿ."

" ಚೌ ಚೌ, ಓಂಪುಡಿ, ಮುಚ್ಚೋರೆ, ಕೋಡುಬಳೆ ? "

" ವಿಷಗಳೇ ಸರಿ ! ಚೆನ್ನಾಗಿ ಕಾಯಿಸಿ, ಆರಿಸಿ, ತುಸ ಸಕ್ಕರೆ ಬೆರಸಿ, ರುಚಿ ಹದ ಮಾಡಿಕೊಂಡು ಒಂದು ಲೋಟ ಹಾಲು ಕುಡಿಯಿರಿ. ಈ ವಿಷಗಳು ಜ್ಞಾಪಕಕ್ಕೆ ಬಂದಾಗ."

" ? ! " ಅಂದ ಏಕಾಂಬರ.

" ಹತ್ತು ರೂಪಾಯಿ." ಅಂದರು ಡಾಕ್ಟರು.

ಏಕಾಂಬರ ಹತ್ತು ರೂಪಾಯಿ ಕೊಟ್ಟು ವೈದ್ಯರ ಚೀಟಿ ಕೊಂಡುಕೊಂಡು. ತನ್ನ ಪಾಲೀ ಶಿಕ್ಷೆಯ ಹುಕುಮ್ ಹಿಡಿದುಕೊಂಡವನಂತೆ ಹೊರಗೆ ಬಂದ.

ಪಾಪ, ಏನು ಮಾಡಬಲ್ಲ ? ತನ್ನ ಪಥ್ಯವನ್ನು ಶುರು ಮಾಡಿದ. ಮೂರು ದಿನಗಳವರಿವಿಗೆ, ಆರಂಭದ ಹುಮ್ಮಸ್ಸಿನಿಂದಲೋ ಅಥವಾ ಡಾಕ್ಟರಿಗೆ ತೆತ್ತ ಹತ್ತು

ರೂಪಾಯಿಯ ನೆನಪಿನಿಂದಲೋ ಏನೋ ತೊಂದರೆ ಎನಿಸಲಿಲ್ಲ. ನಾಲ್ಕನೆಯ ದಿವ ಸ್ಟುಡಿಯೋದಲ್ಲಿ ತಾನು ಅಭಿನಯಿಸುತ್ತಿದ್ದ 'ಶ್ಯಾನುಭೋಗರ ಮಗ' ಚಿತ್ರದ ಕೆಲಸದ ಸಮಯದಲ್ಲಿ ಏಕಾಂಬರನ ಹೊಟ್ಟೆಯಲ್ಲಿ ಜ್ವಾಲಾಮುಖಿ ಹೊಗೆಯಾಡಿತು. 'ಶ್ಯಾನು ಭೋಗರ ಮಗ' ಚಿತ್ರದಲ್ಲಿ ಒಂದು ವೈದೀಕದ ಸೀನು ಚಿತ್ರೀಕರಣವಾಗುತ್ತಿದೆ. ಬ್ರಾಹ್ಮಣರು ಊಟಕ್ಕೆ ಕುಳಿತಿದ್ದಾರೆ. ಇದೇ ಏಕಾಂಬರ ಅಥವಾ ಉಜ್ವಲಕುಮಾರ ಬ್ರಾಹ್ಮಣರಿಗೆ ಆಪೋಶನ ಹಾಕಬೇಕು. ಕ್ಯಾಮರಾ ಸಿದ್ಧವಾಗಿದೆ. ಭಾರಿ ಬೆಳಕು ಗಳನ್ನು ಜೋಡಿಸಿದ್ದಾರೆ. ಹಠಾತ್ತನೆ ಉಜ್ವಲಕುಮಾರನ ನೆತ್ತಿಗೆ ಪಿತ್ಥ ಏರಿದಂತಾಗಿ ಕೈಯೊಡ್ಡಿದ ಬ್ರಾಹ್ಮಣರಿಗೆ ಹೇಳಿದ–" ತಿನ್ನಿ, ಚೆನ್ನಾಗಿ ತಿನ್ನಿ! ಗಢದ್ದಾಗಿ ತಿನ್ನಿ !! ತಿಂದು ನೀವು ಅಜೀರ್ಣದಿಂದ ನರಳಿ. ಎಷ್ಟು ದಿನ ಹೀಗೆ ದಂಡ ಪಿಂಡ ತಿನ್ನುತ್ತೀರೋ ನೋಡ್ತೇನೆ ಅಂತ.

" ಕಟ್ " ಅಂದರು H. M. D. C. ಹಂಸರಾಜ್

" ಶ್ಯಾನುಭೋಗರ ಮಗ " ಚಿತ್ರಕ್ಕೆ ವೈದೀಕದ ಸೀನಿನೊಂದಿಗೆ ವೈದೀಕ ವಾಯ್ತು. ಪುನಃ ಏಕಾಂಬರನಿಗೆ ಬಣ್ಣ ಹಚ್ಚಲು ಹಂಸರಾಜರಿಗೆ ಧೈರ್ಯ ಬರಲಿಲ್ಲ. ಆದರೂ ಏಕಾಂಬರನಲ್ಲಿ ಅವರಿಗೆ ಒಂದು ವಿಧವಾದ ಪ್ರೀತಿ ಇತ್ತು. ಅವರ ಅದೃಷ್ಟ ದೇವತೆ ಏಕಾಂಬರನ ಮುಖಾಂತರವೇ ಅವರಿಗೆ ಒಲಿದಿದ್ದಳು. ಆದ್ದರಿಂದ ಏಕಾಂಬರ ಇಂದಲ್ಲ ನಾಳೆ ಸರಿಹೋಗುತ್ತಾನೆ ಅಂತ ನಂಬಿದ್ದರು. ಆದರೆ ಒಂಭತ್ತನೇ ದಿನ ಅವರ ಗಾಳಿಗೋಪುರ ಕುಸಿದುಬಿತ್ತು.

ಮಧ್ಯಾಹ್ನ ಸುಮಾರು ನಾಲ್ಕು ಗಂಟೆ ಸಮಯ. ಹಂಸರಾಜರು, ಸ್ಟುಡಿಯೋ ದಲ್ಲಿ ತಮ್ಮ ಕೋಣೆಯಲ್ಲಿ ಚಹಾ ಸೇವಿಸುತ್ತಿದ್ದಾರೆ. ಚಹಾ ಜೊತೆ ಅಂದು ಮುಚ್ಚೋರೆ ತರಿಸಿದ್ದಾರೆ. ಮುಚ್ಚೋರೆ ಎರಡು ಮೂರು ತುಂಡುಗಳನ್ನು ಬಾಯಲ್ಲಿ ಅಗಿದು ತಿಂದಿದ್ದಾರೆ. ಪಕ್ಕದ ಕೋಣೆಯ ಬಾಗಿಲು ದಿಢೀರಂತ ತೆರೆಯಿತು. ಏಕಾಂಬರ ರೋಷದಿಂದ ನುಗ್ಗಿದ.

" ನಿಲ್ಲಿಸಿ ! ನಿಮ್ಮ ಈ ಭಯಂಕರ ಕರ್ಕಶ ಶಬ್ದವನ್ನು ನಿಲ್ಲಿಸಿ ! " ಅಂತ ಚೀರಿದ.

" ಉಜ್ವಲ ! ಏನಾಗಿದೆ ನಿನಗೆ ? " H. M. D. C. ಹಂಸರಾಜ್ ಕೇಳಿದರು.

" ನನಗೇನಾಗಿಲ್ಲ. ಆದರೆ ಇನ್ನೊಂದು ತುಂಡು ಈ ಹಾಳು ಮುಚ್ಚೋರೆ ನಿಮ್ಮ ಬಾಯಿಗೆ ಹಾಕಿಕೊಂಡಿದ್ದೇ ಆದರೆ ನಿಮ್ಮ ಗತಿ ಏನಾದೀತು ಅಂತ ತಿಳಿ ಯುತ್ತೆ ! " ಅಂದ.

ಹಂಸರಾಜರಿಗೆ ಇನ್ನೊಂದು ತುಂಡು ಮುಚ್ಚೋರೆ ಬಾಯಿಗೆ ಹಾಕಲು ಧೈರ್ಯ ಬರಲಿಲ್ಲ.

" ಉಜ್ವಲ —ಛೆ ನೀನಿನ್ನು ಉಜ್ವಲಕುಮಾರನಲ್ಲ. ಕೇವಲ ಏಕಾಂಬರ. ತೊಲಗು ಇಲ್ಲಿಂದ. ಒಂದು ತಿಂಗಳ ಸಂಬಳ ತೆಗೆದುಕೊಂಡು ಈಕ್ಷಣ ಇಲ್ಲಿಂದ ತೊಲಗು " ಅಂದರು.

ಏಕಾಂಬರ ಹಾಗೇ ಕುಸಿದ. ತನ್ನ ಮುಂದಿನ ಪ್ರಪಂಚ ಶೂನ್ಯವಾಗಿ ಕಂಡಿತಂತೆ. ಶೂನ್ಯ ಅಂದರೆ ಅರ್ಥವೇನೆಂದು ಅವನು ಹೇಳಲಿಲ್ಲ. ಆದರೆ ನಾವು ಊಹಿಸಬಹುದು ಅಷ್ಟೆ. ಸನ್ನಿವೇಶ ವಿಪರೀತ ತಿರುವು ತೊಡಕಿನದಾಯ್ತು. H M D. C ಹಂಸರಾಜ್ ಮತ್ತು ಏಕಾಂಬರ ಒಬ್ಬರಮುಂದೊಬ್ಬರು ದೆವ್ವ ಬಡಿದವರಂತೆ ನಿಂತಿದ್ದರು. ಅವರಿಬ್ಬರ ಭೇಟಿ ಯಾವಾಗ, ಹೇಗೆ ಮುಕ್ತಾಯವಾಗುತ್ತೆ ಅಂತ ಹಂಸರಾಜರ ಕಾರ್ಯದರ್ಶಿ ಮತ್ತು ಡ್ರೈವರ್ ನಡುವೆ ಆಗಲೇ ಬಾಜೀ ಕುದುರಿತ್ತು. ಅದೇ ಮುಹೂರ್ತದಲ್ಲೇ ಸ್ಟುಡಿಯೋವಿನ ಮತ್ತೊಂದು ಕಡೆ ಗುಲ್ಲೆದ್ದಿತು.

'ಶೂರ್ಪನಖಾ ಪರಿಣಯ' ಚಿತ್ರದಲ್ಲಿ ರಾಜಕುಮಾರಿ ಶೂರ್ಪನಖಿಯ ಅಂಗ ರಕ್ಷಕಿಯ ಪಾತ್ರ ಧರಿಸಿದ್ದ ತಾರೆ–ಚಂದ್ರಮುಖಿ, ತನ್ನ ಖಡ್ಗವನ್ನು ಬೀಸುತ್ತಾ ಸ್ಟುಡಿಯೋದಲ್ಲೆಲ್ಲಾ ಆವೇಶದಿಂದ ಓಡಾಡಿ, ಕಡೆಗೆ ಡೈರೆಕ್ಟರ ಕೋಣೆಯೊಳಕ್ಕೆ ನುಗ್ಗಿದಳು. H· M. D C. ಹಂಸರಾಜ್ ಅದೇ ತಾನೇ ಏಕಾಂಬರನೊಂದಿಗೆ ವಾಗ್ಯುದ್ಧ ನಡೆಸಿದ್ದರು. ಖಡ್ಗಸಜ್ಜಿತ ಚಂದ್ರಮುಖಿಯನ್ನು ನೋಡಿ, ಹಿಂದೂ ಮುಂದೂ ಯೋಚಿಸದೆ ಒಂದೇ ಬಾರಿಗೆ ಅಲ್ಲಿದ್ದ ಬೀರುವಿನ ಮೇಲೆ ಹತ್ತಿ ಕುಳಿತರು. ಚಂದ್ರಮುಖಿಗೆ ರೋಷ ಹೆಚ್ಚಿತು. ತನ್ನ ಖಡ್ಗವನ್ನು ಹಂಸರಾಜ್ ಅವರ ಕಡೆ ತಿವಿಯುತ್ತಾ ಆರ್ಭಟಿಸಿದಳು.

"ಇಳಿ ನಡೆ ನಮ್ಮ ರಾವಣ ಚಕ್ರವರ್ತಿಯ ಆಸ್ಥಾನಕ್ಕೆ ನಡೆ"

ಹಂಸರಾಜರು ನಡುಗಿದರು.

ಏಕಾಂಬರ ಆದನ್ನೆಲ್ಲಾ ನೋಡಿದ. ನೋಡುತ್ತಿದ್ದಂತೆಯೇ ಅವನ ಕಣ್ಣುಗಳು ಕೆಂಪಾದವು. ತಲೆಯ ಕೂದಲುಗಳು ಎದ್ದು ನಿಂತವು. ಮೂಗಿನ ಹೊಳ್ಳೆಗಳು ವಾಯುಗಲವಾದವು ಒಂದು ಬಾರಿ ತನ್ನ ಇಡೀ ದೇಹವನ್ನು ಕೊಡವಿಕೊಂಡು. ತನ್ನ ಮುಂದಿದ್ದ ಕುರ್ಚಿಯನ್ನೆತ್ತಿ ಗುರಾಣಿಯಂತೆ ಮರೆಮಾಡಿಕೊಂಡು ಮುನ್ನುಗ್ಗಿ ಚಂದ್ರಮುಖಿಯ ಕೈಯಿಂದ ಕತ್ತಿಯನ್ನು ಮಿಂಚಿನ ವೇಗದಿಂದ ಕಸಿದುಕೊಂಡ.

"ಷಹಭಾಸ್" ಅಂದರು H M D C. ಹಂಸರಾಜ್.

"ನೀನ್ಯಾರು ನಿನಗೇನಾಗಿದೆ ನಿನ್ನ ಹೆಸರೇನು" ಅಂತ ಕೇಳಿದ ಏಕಾಂಬರ.

"ಕ್ಷಮಿಸಿ ಉಜ್ವಲಕುಮಾರ್. ನಾನು ಚಂದ್ರಮುಖಿ" ಅಂತ ಅಳುಕ್ಕೆ ಶುರು ಮಾಡಿದಳು.

"ನಿನ್ನ ಈ ಹುಚ್ಚಿಗೆ ಕಾರಣವೇನು"

"ಕಾರಣ ಏನು ಹೇಳಲಿ? ನಾನು ಸರಿಯಾಗಿ ಊಟಮಾಡಿ ಒಂದುವಾರ ವಾಯ್ತು ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ – ಕೇವಲ ಒಂದು ಮುಷ್ಟಿ ಅವಲಕ್ಕಿ, ಒಂದು ಚಟಾಕು ಸಪ್ಪೆ ಹಾಲು, ಈ ಪಥ್ಯದಲ್ಲಿದ್ದೆ. ಇವತ್ತು ಶೂರ್ಪನಖಿಯ ಶಯ್ಯಾಗೃಹದ ಸೀನಿಗೆ ತಂದಿರಿಸಿದ್ದ ಹೋಟೆಲು ತಿಂಡಿಗಳನ್ನು ನೋಡಿ, ನನ್ನ ತಲೆಯಲ್ಲಿ ಏನೋ ಭಯಂಕರವಾಗಿಹೋಯ್ತು. ಆಮೇಲೆ ಏನಾಯ್ತು ಅಂತ ನಂಗೊತ್ತಿಲ್ಲ."

ಏಕಾಂಬರ ಶಾಂತನಾದ. ಚಂದ್ರಮುಖಿ ತನಗೊಬ್ಬ ಸಹಚಾರಿ ಅಂದುಕೊಂಡು ಕನಿಕರಪಟ್ಟ. ನಿಜ-ಆಕೆಗೆ ತನಗಿಂತಲೂ ಅವಲಕ್ಕಿಯೊಂದು ಹೆಚ್ಚಾಗಿತ್ತು. ಆದರೂ ತನ್ನಂತೆಯೇ ಈಕೆ ನೊಂದ ಜೀವಿ.

" ಚಂದ್ರಮುಖಿ, ಅರ್ಥವಾಯ್ತು. ನಾನೂ ನೀನೂ ಈ ಜೀವನದಲ್ಲಿ ಒಂದೇ ವಿಧವಾದ ಶಾಪಕ್ಕೆ ಗುರಿಯಾಗಿದ್ದೇವೆ " ಅಂದ.

ಅಷ್ಟೇ ಅಲ್ಲ. ತನ್ನ ದೇಹಸ್ಥಿತಿ, ಅದರ ಸಂಕಟ ಎಲ್ಲಾ ಚಂದ್ರಮುಖಿಗೆ ಹೇಳಿದ. ಆಕೆಯೂ ತನ್ನ ದೇಹಸ್ಥಿತಿ, ಅದರ ಸಂಕಟ, ಪಥ್ಯ. ಅದರ ಸಂಕಟ ಎಲ್ಲಾ ಏಕಾಂಬರ ನಿಗೆ ಹೇಳಿದಳು.

ವಾತಾವರಣವು ಶಾಂತವಾದಮೇಲೆ ಹಂಸರಾಜ್ ಕೆಳಗಿಳಿದು ಬಂದರು. ಅವರ ಮುಖದಲ್ಲಿ ಕರುಣಾರಸ ಉಕ್ಕುತ್ತಿತ್ತು.

" ಮಕ್ಕಳೇ ಹೆದರಬೇಡಿ. ನಿಮ್ಮಿಬ್ಬರಿಗೂ ಈ ಪಥ್ಯಗಳನ್ನು ವಿಧಿಸಿದ ವೈದ್ಯ ರಿಬ್ಬರೂ ಸಮಾಜ ದ್ರೋಹಿಗಳು. ಅಜ್ಞಾನಿಗಳು. ಅಡುಗೂಲಜ್ಜಿ ಕಾಲದವರು. ಈಗಿನ ಚಿಕಿತ್ಸಾ ವಿಧಾನದಲ್ಲಿ ಪಥ್ಯವೇ ಇಲ್ಲ. ನಿಮಗೆ ಇಷ್ಟವಾದ ಆಹಾರದಲ್ಲೇ ನಿಮ್ಮ ಚಿಕಿತ್ಸೆ ಮಾಡಿಸುತ್ತೇನೆ " ಅಂತ ಧೈರ್ಯ ಹೇಳಿದ.

ತಾನು, ತಿನ್ನುತ್ತಿದ್ದ ಮುಚ್ಚೋರೆಯನ್ನು ಅವರಿಬ್ಬರಿಗೂ ಹಂಚಿ, ಅವರ ಪಥ್ಯದ ಮುಕ್ತಾಯ ಮಾಡಿದ.

" ಆದ್ದರಿಂದಲೇ ನಾನು ಹೇಳಿದ್ದು " ಮಲ್ಲ್ಯರಾಯರು ಹೇಳಿದರು—" ಈ ಪಥ್ಯದ ವಿಷಯ ಅನುಭವಿಸಿದವರಿಗೆ ಮಾತ್ರ ಗೊತ್ತು ಅಂತ."

ನಾವೆಲ್ಲರೂ ಒಪ್ಪಿಗೆಯ ತಲೆ ಅಲ್ಲಾಡಿಸಿದೆವು.

—ಕೇಶು

೨೨

ಬೆಂಗಳೂರು ಬಂದ್ ಯಶಸ್ವಿಯಾಗಿ ನಡೆಯಿತು. (ಹೇಳಿಕೆ)

—ಆ ದಿನ ನಡೆದಷ್ಟು ವ್ಯಾಪಾರ ನಮ್ಮ ಹೋಟಲಿನಲ್ಲಿ ಎಂದೂ ನಡೆಯಲಿಲ್ಲ. ಮಣಕಲು ಸಾಮಾನೆಲ್ಲಾ ಮಾರಾಟವಾಗಿಹೋಯಿತು ಎಂದೊಬ್ಬರ ಅಂಬೋಣ.

ಹದಿನೇಳು ಪೈಸೆಯ ಸೂತ್ರ

ತರಕಾರಿ ಅಂಗಡೀಲಿ ಮೊನ್ನೆ ಒಂದು ಕಿಲೋ ಟೊಮಾಟೋ ಹಾಕಿಸಿಕೊಂಡು ಬೆಲೆ ಎಷ್ಟು ಎಂದು ಕೇಳಿದಾಗ 'ಒಂದು ರೂಪಾಯಿ' ಎಂದ ಅಂಗಡಿಯಾತ. 'ಒಂದು ರೂಪಾಯಿಯೇ' ಎಂದು ಬೆರಗಾಗಿ ಕೇಳಿದೆ.

'ರೂಪಾಯಿಯಲ್ಲಿ ರೂಪಾಯಿ ಎಲ್ಲಿ ಬಂತು ಸ್ವಾಮಿ ಈವಾಗ ಕೇವಲ ಹದಿನೈದು ಪೈಸೆ ತಾನೆ ಅದರಲ್ಲಿರೋದು ಹಾಗಂತ ಯಾರೋ ಹೇಳಿದರು ಅಂತ ಪೇಪರಲ್ಲಿ ಬಂದಿತ್ತಲ್ಲವೆ' ಎಂದು ನಕ್ಕ ಆತ.

ಅವನ ಲೋಕ ಪರಿಜ್ಞಾನಕ್ಕೆ ತಲೆದೂಗಲೇಬೇಕಾಯಿತು.

* * * *

ಹೌದು, ರೂಪಾಯಿಗೆ ಈಗ ಹದಿನೇಳೇ ಪೈಸೆ ಬೆಲೆ ಅಂತ ಅರ್ಥಶಾಸ್ತ್ರಜ್ಞ ಡಾಕ್ಟರ್ ಅಗರ್‌ವಾಲಾ ಹೇಳಿದರೆಂದು ಪತ್ರಿಕೆಗಳಲ್ಲಿ ಬಂದಿತ್ತು. ಅವತ್ತು ಕ್ಲಬ್ಬಿನಲ್ಲಿ ಆ ಹದಿನೇಳು ಪೈಸೆಯ ಸೂತ್ರದ ಪ್ರಕಾರ ನಮ್ಮ ನಮ್ಮ ವರಮಾನ ಎಷ್ಟೆಂದು ಲೆಕ್ಕ ಹಾಕಿದ್ದೇ ಹಾಕಿದ್ದು. ಇನ್ನೂರು ತಿಂಬ ಹೊಸ ಹುಡುಗ ಮೂವತ್ನಾಲಕ್ಕೇ ನನ್ನ ಸಂಬಳ ಎಂದು ಪೆಚ್ಚಾದರೆ; ಎರಡು ಸಾವಿರದ ಹಳೇ ಹುಣಿಸೇ ಮರ ಅಯ್ಯೋ ನಾಲ್ನೂರು ಕೂಡ ಆಗಲಿಲ್ಲವಲ್ಲೋ ನನ್ನದು ಎಂದು ಪೇಚಾಡಿತು.

ಹೀಗೆ ಹದಿನೇಳು ಪೈಸೆ ಸೂತ್ರದಲ್ಲಿ ಎಲ್ಲರೂ ಸಂಬಳ ಎಣಿಸಿಕೊಂಡು ಸಂಕಟದ ನಗು ನಗುತ್ತಿರುವಾಗಲೇ ಕಾಮತ್ ತನ್ನ ಪ್ಯಾಂಟಿನ ಕಿಸೆಯಿಂದ ರಶೀದಿ ಪುಸ್ತಕ ತೆಗೆದದ್ದು. ಪ್ರಾಣಿದಯಾ ಸಂಘದ ಸ್ಥಾಪನೆಗಾಗಿ ಆತ ನಿರ್ದಯನಾಗಿ ನಮ್ಮಿಂದ ಚಂದಾ ವಸೂಲಿಗೆ ನಿಂತ. ನಾವೂ ಸುಮ್ಮನಿರಲಿಲ್ಲ. 'ರೂಪಾಯಿಗೆ ಹದಿನೇಳು ಪೈಸೆಯಾಗಿದೆ. ನಮ್ಮ ನಮ್ಮ ನಂಬಳ ಎಷ್ಟಂತ ಕೇಳಿದೆಯಲ್ಲ ಈಗ ತಾನೆ. ಅಂದಮೇಲೆ ನಮ್ಮಿಂದ ಚಂದಾ ಬೇಡೋಕೆಮನಸ್ಸಾದರೂ ಹೇಗೆ ಬರುತ್ತೆ ನಿನಗೆ ಎಂದು ದಬಾಯಿಸಲು ಪ್ರಯತ್ನಿಸಿದೆವು. ಆತ ಒಳ್ಳೇ ಚಿನಿಗಾರನ ನಯಗಾರಿಕೆ ತೋರಿಸುತ್ತ ಅಯ್ಯಗಳಿರ, ನಾನು ಕೇಳೋದು ಪವನಲ್ಲ, ರೂಪಾಯಿಯಲ್ಲ ಕೇವಲ ಮೂವತ್ನಾಲಕ್ಕು ನಯೇ ಪೈಸೇ ಎನ್ನುತ್ತಾ ಅಗರವಾಲ ಸೂತ್ರವನ್ನು ಅನ್ವಯಿಸಿ ನಮ್ಮಿಂದೆಲ್ಲ ಎರಡೆರಡು ರೂಪಾಯಿ ಕಿತ್ತುಕೊಂಡ. ಅನಂತರ ಚಂದಾ ವೃತ್ತಿಯುವರೆಲ್ಲ ಕ್ಲಬ್ಬಿಗೆ

ಬಂದು ಬೇಡುವುದು ಒಂದು ಎರಡು, ಐದು ಹತ್ತು ರೂಪಾಯಲ್ಲ. ಹದಿನೇಳು ಮೂವತ್ನಾಲ್ಕು, ಎಂಭತ್ತೈದು ಪೈಸೆಗಳನ್ನು.

ಈ ಹದಿನೇಳು ಪೈಸೆ ಸೂತ್ರ ಕ್ಲಬ್ಬಿನ ಆವರಣದಲ್ಲೇ ಇರಲಿ. ಮನೆ ಮನೆಯಲ್ಲಿಯೂ ಹರಡಿದರೆ ಅನಾಹುತವಾದೀತು ಎಂದು ಎಲ್ಲರೂ ಎಚ್ಚರಿಕೆಯಿಂದಿದ್ದೆವು. ಆದರೆ ಅದು ಪ್ರಯೋಜನಕ್ಕೆ ಬರಲಿಲ್ಲ. ಗುಳ್ಳಾಚಾರಿ ಮೊನ್ನೆ ಕ್ಲಬ್ಬಿಗೆ ಬಂದು ಕೆಲಸ ಕೆಟ್ಟಿತು ಎಂದು ನಿಟ್ಟುಸಿರುಗರೆದ. ಕೆಟ್ಟಿದ್ದು ಮತ್ತೇನಿಲ್ಲ. ಅವನ ಹೆಂಡತಿ ಪೇಟೆಗೆ ಹೋದವಳು ಇಡೀ ನೂರರ ನೋಟು ಕೊಟ್ಟು ಅಗತ್ಯವಿಲ್ಲದಿದ್ದ ಪಾಲಾ ಸಿಸ್ಟಳ ಅಳುಬರುಕು ಬಣ್ಣದ ಸೀರೇ ತಂದಿದ್ದು ಮಾತ್ರವಲ್ಲದೆ "ಏನು ಮಹಾ ಹದಿನೇಳು ಕೊಟ್ಟ ಹಾಗಾಯಿತು...ನೂರಕ್ಕೆ ಈಗ ಹದಿನೇಳೇ ಬೆಲೆ ಅಂತಲ್ಲವೇ ಅಂಗಡಿಯವ ಹೇಳಿದ. ಎಂದೆಲ್ಲ ಗದರಿದಳಂತೆ. ಗುಳ್ಳಾಚಾರಿ "ನೂರಕ್ಕೆ ಹದಿನೇಳರ ಬೆಲೆ ಇರಬಹುದು ಕಣೆ...ಆದರೆ ನನಗೆ ತಿಂಗಳಿಗೆ ಸಿಗೋ ಮುನ್ನೂರಕ್ಕೆ ಐವತ್ತೇ ಬೆಲೆಯಾಗುತ್ತಲ್ಲ ಆ ಐವತ್ತರಲ್ಲಿ ನೀನು ಈ ಪಾಟಿ ಬೆಲೆಯ ಸೀರೆ ಕೊಂಡುಕೊಂಡರೆ ಉಳಿಗಾಲವುಂಟೆ ಎಂದು ಗೋಗರೆದರೆ ಆಕೆ ಕಿವಿಗೇ ಹಾಕಿಕೊಳ್ಳಲಿಲ್ಲವಂತೆ. ಅಂತೂ ಎಲ್ಲರಿಗೂ ಈ ಅಪಾಯ ಕಾದಿದೆ ಎಂದುಕೊಂಡೆವು.

ಅನಂತರ ಹದಿನೇಳರ ಸೂತ್ರ ಎಲ್ಲರಿಗೂ ತಿಳಿದು ಹೋಯಿತು. ತರಕಾರಿ ಅಂಗಡಿಯಲ್ಲೂ ಅದನ್ನು ಕೇಳಬೇಕಾಯಿತು. ಆ ವಿಷಯವನ್ನು ಮನೆಗೆ ಬಂದು ಕದ್ದು ಕೇಳ್ತ ಕೆಲಸದಾಕೆ ಸುಮ್ಮನಿರುತ್ತಾಳೆಯೇ ನಾವು ಕೊಡುವ ಸಂಬಳ ಒಂದು ರೂಪಾಯಿ ಎಪ್ಪತ್ತು ಪೈಸೆ ಎಂದು ಹೀಯಾಳಿಸಿದಳು.

'This is too much' ಎಂದು ರೇಗಿ ಕ್ಲಬ್ಬಿಗೆ ಓಡಿದೆ

ಅವತ್ತು ಸಾಯಂಕಾಲ ಕ್ಲಬ್ಬಿನಲ್ಲಿ ಹದಿನೇಳು ಪೈಸೆ ಸೂತ್ರದ ಕುರಿತು ಒಂದು ತೀರ್ಮಾನಕ್ಕೆ ಬಂದೆವು ಆ ಸೂತ್ರದ ಕುರಿತು ಯಾರೂ ಏನೂ ಆಡಬಾರದೆಂದು ಅದನ್ನು ಮರತೇ ಬಿಡಬೇಕೆಂದು.

—ರಾಮಿ.

ಮುಡಿಕಟ್ಟಿ ನಿಂತಿರುವೆ ಗುಲ್ಜಾರಿ ನಂದ
ಲಂಚಮೌರ್ಯರ ತುಳಿಯೆ ನಮಗೆಲ್ಲಾ ಆನಂದ
ಇತಿಹಾಸ ಮರೆಯದಿರು ಎಲೆ ಮಂತ್ರಿ ಮಾಣಿಕ್ಯ
ಮೌರ್ಯರಲಿ ಸೇರಿದನು ನಂದಾರಿ ಚಾಣಿಕ್ಯ.

* * * *

★ ಕಾಕರಾಜ ನವಿಲನ್ನು ಕೊಂದದ್ದು ★

★

ಮಳೆ ಬಂತು. ತಿರುಗಿ ಮಳೆ ಬಂತು. ಕಾಕರಾಜ ತನ್ನ ಪ್ರೇಯಸಿಯೊಂದಿಗೆ ಮಾತನಾಡಲಾರಂಭಿಸಿದ. ಎತ್ತರದ ಮರದ ಮೇಲೆ ಎಲೆಗಳ ಮರೆಯಲ್ಲಿ ಗೂಡು ಕಟ್ಟಿಕೊಂಡು ವಾರಣವಾಗಿ ಸಂಸಾರ ಮಾಡುಕ್ಕೆ ಶುರುಮಾಡಿದ.

ಎರಡೇ ವಾರಗಳಲ್ಲಿ ಕಾಕಾ ವೈದ್ಯರ ಹತ್ತಿರ ಹೋಗಿ ಔಷಧಿ ತಂದು "ಇದನ್ನು ತೊಗೊಳ್ಳೇ ! ವಾಂತಿ ಕಡಿಮೆ ಆಗುತ್ತೆ. ಆಗ ತಿಂದಿದ್ದು ಮೈ ಹತ್ತುತ್ತೆ" ಎಂದು ಪ್ರೀತಿಯ ಮಾತಾಡುತ್ತ ಕಾಕರಸಿಯನ್ನು ಉಪಚರಿಸಿದ.

ಇನ್ನೆರಡು ವಾರ ಆಯಿತು. "ಲೇ ! ಎಷ್ಟು ಚೆಂದಾಗಿ ಕಾಣಿಸ್ತಾ ಇದೀಯೇ ಮನುಷ್ಯರು ಇಷ್ಟು ಸೊಬಗಿನಿಂದ ಕಾಣುಕ್ಕೆ ನಾಲ್ಕು ತಿಂಗಳು ಕಾಯುತ್ತಾರೆ" ಎಂದು ಕೊಕ್ಕಿಗೆ ಕೊಕ್ಕನ್ನು ಹಿತವಾಗಿ ಮಸೆದ.

*   *   *   *

ಈ ಕಾಕರಾಜನ ಆಲಾಪನಾ ಪ್ರಲಾಪಗಳು ಮರದ ಹತ್ತಿರ ಇದ್ದ ಗುಡಿಸಿಲ ತಿಮ್ಮನಿಗೆ ಕೇಳಿಸುತ್ತಿತ್ತು. "ಈ ಕಾಗೆ ಮುಂಡೇದು ಹಿಂಗ್ಯಾಕೆ ಹಾರಾಡ್ತಿದೆ. ಕಾಕಾ ಎಂದು ಕೂಗದೆ ಎಂಗೆಂಗೋ ನರಳುತ್ತಲ್ಲ. ಇದಕ್ಕೇನು ಬೇನೆ ಇರಬೋದು" ಎಂದು ತಿಮ್ಮ ಯೋಚಿಸಿದ. ಹದಿನಾರರ ಪ್ರಾಯ. ಏನೋ ತೊಂಚಾವಂಚ. ಏಕೆ ಅಷ್ಟೊಂದು ಸರಿಯಾಗಿ ತಿಳಿಯದು. ಮರೆಯಾಗಿರೋದು ಏನಿದ್ದರೂ ತಲಾಷ್ ಮಾಡಿ ತಿಳಕೋಬೇಕು ಎಂಬ ಕುತೂಹಲ. ಕಾಗೆ ಗೂಡನ್ನು ನೋಡೇಬಿಡೋಣ ಮರ ಹತ್ತಿ. ಗೂಡಿನಲ್ಲಿ ಔಷಧಿ ಇದ್ದರೆ. ಏನೋ ರೋಗ ಅಂತ ಖಂಡಿತ ಮಾಡ ಬಹುದು" ಎಂದು ಮರ ಹತ್ತಿದ. ಸಾಹಸಪಟ್ಟು ಮರ ಹತ್ತಿ ಕಾಗೆ ಗೂಡನ್ನು ನೋಡಿದ. ನಾಲ್ಕು ಮೊಟ್ಟೆಗಳಿತ್ತು ಎಲ್ಲವೂ ಮಂಕು ಬಣ್ಣದ ಮೊಟ್ಟೆಗಳು. ಗುಡಿಸಿಲ ತಿಮ್ಮನಿಗೆ ಆ ವಯಸ್ಸಿನಲ್ಲಿ ರಂಗು ಕಂಡರೆ ಮೆಚ್ಚು. ಮಂಕು ಮಂಕಾಗಿರೋ ಮೊಟ್ಟೆಗಳಿಗೆ ರಂಗು ಹಚ್ಚಿಡೋಣ. ಕಾಕರಾಜ ಬಂದಾಗ. ರಂಗಿನ ಮೊಟ್ಟೆಗಳನ್ನು ಕಂಡರೆ, ಸಂತೋಷ ಪಟ್ಟುಕೊಂಡಾನು. ಆಮೇಲಾದರೂ ಹಿತವಾಗಿ ಕಾ ಕಾ ಹಾಡೋನು ಎಂದುಕೊಂಡು, ಕೆಳಗಿಳಿದು ಬಂದು, ಬಯಲುನಾಟಕಕ್ಕೆ ಇಟ್ಟಿದ್ದ ಬಣ್ಣ

ತೆಗೊಂಡು ಹೋಗಿ. ಆ ಮೊಟ್ಟೆಗಳಿಗೆ ಹಚ್ಚಿದ. ಕಾಮನ ಬಿಲ್ಲಿನ ಹಾಗೆ ಆ ಮೊಟ್ಟೆಗಳು ಕಂಡಾಗ ಹಿಗ್ಗಿದ. ಇಳಿದ.

*　　　*　　　*　　　*

ಗುಡಿಸಿಲ ಹತ್ತಿರದ ಹುತ್ತದಲ್ಲಿ ಹಾವುಗಳಿರೋದು ಕಂಡಿದ್ದ ತಿಮ್ಮ. ಅದಕ್ಕೇ ನವಿಲುಗಳನ್ನು ಸಾಕಿದ್ದ. ಮೂರು ಹೆಣ್ಣು ನವಿಲುಗಳಿದ್ದುವು ಒಂದು ಗಂಡು. ಅಂದ ಮೇಲೆ ಗಂಡಿನ ಜಂಭ ಕೇಳಬೇಕೇ? ರೆಕ್ಕೆ ತೆರೆದು, ನವಿಲ ಕಣ್ಣು ಕಣ್ಣಿನಲ್ಲೂ ತನ್ನ ಅಂತಃಪುರದ ಅರಸಿಯರನ್ನು ನೋಡುತ್ತಾ ಕೇಕೇ ಹಾಕಿ ಕುಣಿಯುತ್ತಿದ್ದ. ನವಿಲು ಕುಣಿದಾಗಲೆಲ್ಲಾ ಗುಡಿಸಿಲ ತಿಮ್ಮನಿಗೂ ಕುಣಿಯೋಣ ಅನ್ನಿಸೋದು.

ಆ ದಿನ ತುಸು ಹನಿ ಹಾಕಿದೆ. ಗಂಡು ನವಿಲು ಕುಣಿಯುತ್ತಾ ಇದೆ. ಅದನ್ನೇ ನೋಡ್ತಾ ತಿಮ್ಮ ಗುಡಿಸಲ ಬಳಿ ನಿಂತಿದ್ದಾನೆ.

ಕಾಕರಾಜ ಜಯಕಾರಮಾಡುತ್ತಾ ತನ್ನ ಗೂಡಿನತ್ತ ಹಾರಿ ಹೋದ. ಒಂದೇ ಕ್ಷಣ ಇರಬಹುದು. ಗೂಡಿನಲ್ಲಿದ್ದ ತನ್ನ ಮೊಟ್ಟೆಗಳನ್ನು ಕಂಡ. ಅವುಗಳ ಮೇಲಿನ ಬಣ್ಣವನ್ನು ನೋಡಿದ. ನೆಲದ ಕಡೆ ನೋಡಿದ. ಗಂಡು ನವಿಲು ಬಣ್ಣಬಣ್ಣದ ರೆಕ್ಕೆ ತೆರೆದು ಪುಕ್ಕಹಾರಿಸಿ ಕುಣಿಯುತ್ತಿತ್ತು. ಕೋಪ ಉಕ್ಕಿ ಬಂತು. ಸರ್ರಂತ Nose Dive ಮಾಡಿ ಬಂದು ಗಂಡು ನವಿಲನ್ನು ಕುಕ್ಕಿ ಕುಕ್ಕಿ ಕೊಂದು. ಆ ಮೇಲೆ ಜುಟ್ಟು ಜನಿವಾರ ಕಿತ್ತುಹಾಕಿ. ಸನ್ಯಾಸಾಶ್ರಮ ತೊಗೊಂಡು ಹಿಮಾಲಯದ ತಪ್ಪಲಿಗೆ ತಪಸ್ಸಿಗೆ ಅಂತ ಹೊರಟುಹೋದ ಹೋಗುವಾಗ ಕಾಕರಸಿಯನ್ನು ಕುಕ್ಕಿ ನಿನ್ನ ಮಿಂಡ ಸತ್ತುಹೋದ, ನಿನ್ನ ಗಂಡ ತಲೆಬೋಳಿಸಿಕೊಂಡು ಹೊರಟುಹೋಗ್ತಾ ಇದಾನೆ. ಅಡ್ಡಕಸಬಿ ಮಕ್ಕಳನ್ನು ಹೋಗಾದರೂ ಕಾಪಾಡಿಕೊ ಎಂದು ಕೊಕ್ಕು ತುಂಬಾ ಬೈದು ಹೋದ.

ನಿರ್ಮೂಲ ಮಾಡುವೆನು ಲಂಚವನು ಎಂದ
ಕೇಂದ್ರ ಗೃಹಮಂತ್ರಿ ಗುಲ್ಜಾರಿ ನಂದ
ವಾರಿಯೊಳಿಹ ಮೀನು ಕುಡಿಯಿತೇ ನೀರು
ಇಲ್ಲವೇ ಎಂದೆಮಗೆ ಹೇಳುವವರಾರು

*　　　*　　　*　　　*

ಒರಿಸ್ಸಾ ಸಮಸ್ಯೆ

(ಬರೆದವರು . ಅ. ರಾ. ಸೇ.)

★

ದಕ್ಷಿಣ ವಿಯೆಟ್ನಾಂ ಸಮಸ್ಯೆ, ಸೈಪ್ರಸ್, ನಾಗಾಲ್ಯಾಂಡ್ ಮತ್ತು ಕೇರಳಗಳ ಸಮಸ್ಯೆಗಳಿರುವಾಗ ಒರಿಸ್ಸಾದ ಸಮಸ್ಯೆಯನ್ನು ನಾವು ಆರಿಸಿಕೊಂಡಿರುವುದರಲ್ಲಿ ಒಂದು ರಹಸ್ಯವಿದೆ.

ಆರು ತಿಂಗಳಲ್ಲಿ ಹತ್ತು ಕೋಟಿ ರೂಪಾಯಿ ಗಳಿಸಿರುವ ಧೀರರು ಅಲ್ಲಿರುವುದರಿಂದಲ್ಲ—ನಾವು ಈ ಸಮಸ್ಯೆಯ ವಿಶ್ಲೇಷಣೆ ಮಾಡುತ್ತಿರುವುದು. ಅಶೋಕನ ತಲೆಯನ್ನೂ ತಿರುಗಿಸುವ ಸಾಮರ್ಥ್ಯ ಆ ದೇಶಕ್ಕಿದೆಯೆಂದಲ್ಲ ; ' ಸಕಳಿಂಗ ತ್ರಯಾಂ ವೆಂಗಿಂ ' ದೇಶವನ್ನು ಕನ್ನಡಿಗರಾದ ಚಾಳುಕ್ಯರು ಗೆದ್ದರೆಂಬ, ಆಳಿದರೆಂಬ ಅಭಿಮಾನದಿಂದಲೂ ಅಲ್ಲ ; ಈ ಸಮಸ್ಯೆಗೆ ಪ್ರಾಧಾನ್ಯವನ್ನಿತ್ತುದು.

ಹಾಗಾದರೆ ಒಡಿಸ್ಸೀ ನೃತ್ಯದಲ್ಲಿ ನಮಗೆ ಆಸಕ್ತಿ ಇದ್ದೀತೇ? ಪುರಿಯ ಶ್ರೀ ಜಗನ್ನಾಥನ ಭಕ್ತಿಯೋ ?

ಮೊದಲನೆಯ ಪ್ರಶ್ನೆಗೆ ಉತ್ತರ ; ಇಲ್ಲ. ಶ್ರೀ ಜಗನ್ನಾಥನಲ್ಲಿ ಭಕ್ತಿಯಿದೆಯೆಂದು ನಂಬಿದ್ದೇವೆ. ಅವನು ಸರ್ವಶಕ್ತ. ಆದರೆ ಆ ಕಾರಣದಿಂದಲ್ಲ. ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸುವ ಶಕ್ತಿ ಅವನೊಬ್ಬನಿಗೇ ಇದ್ದಿರಬಹುದು.

ಮಿತ್ರಸ್ನೇಹವೇ ಈ ಸಮಸ್ಯೆಯ ವಿಶ್ಲೇಷಣೆಗೆ ನಾವು ಕೈ ಹಾಕಲು ಇರುವ ಕಾರಣ. ಪುಡಿಚಿಲ್ರ್ ಒರಿಸ್ಸಾದಲ್ಲಿದ್ದಾನೆ !

ಅವನು ನಮಗೆ ಬರೆದಿರುವ ಇತ್ತೀಚಿನ ಪತ್ರದಲ್ಲಿ The Problem boils down to this : How to prepare Ragi Halva ?

ನಿಮಗೆ ಗೊತ್ತಿಲ್ಲದಿರಬಹುದು. ನೀವು ಮೈಸೂರು ರಾಜ್ಯದಲ್ಲಿ ಬೆಳೆದಿದೆಯೆಂದು ಭ್ರಮಿಸಿ ಮಾರುಕಟ್ಟೆಯಲ್ಲಿ ಕೊಂಡ ರಾಗಿಯ ಅರ್ಧದಷ್ಟು ಭಾಗ ಒರಿಸ್ಸಾದಿಂದ ಬಂದದ್ದು.

ಈಗ ಅದಕ್ಕೂ ಗತಿಯಿಲ್ಲ ಎನ್ನುವಿರಾ ? Welfare State ಎಂದರೆ ಏನೆಂದುಕೊಂಡಿದ್ದೀರಿ ? ಮಜಾ ಉಡಾಯಿಸಬಹುದು ಎಂದುಕೊಂಡಿದ್ದೀರಾ ? Socialistic Pattern of Society ಎಂದಮೇಲೆ ಯಾರಿಗೂ ಕೂಳೂ ಇಲ್ಲ, ...

'ರಾಗಿ ಹಲ್ವ ತಯಾರಿಸುವುದು ಹೇಗೆ ?' ಎನ್ನುವುದು ಪ್ರತಿಜೀವಿಯ ಸಮಸ್ಯೆಯೇ ಹೊರತು ಒರಿಸ್ಸಾ ಪ್ರಾಂತದ್ದಲ್ಲ. ಒಡಿಸ್ಸಿಗಳಿಗೆ ಪಾಲಿಫೀಮಸ್, ಇಥಾಕಗಳೇ ಅಲ್ಲದ ಪಾಟ್ನಾಯಕ್, ಮಿತ್ರ, ಬಂಗಾಳಿಗಳು ಗಣತಂತ್ರ ಪರಿಷತ್ ಇತ್ಯಾದಿಯಾಗಿ ಅನೇಕ ವಿಶೇಷ ಸಮಸ್ಯೆಗಳಿವೆ. ಭಾರತಕ್ಕೆ ಸಾಮಾನ್ಯ ಸಮಸ್ಯೆಗಳಾಗಿರುವ ಬಡತನ, ನಿರುದ್ಯೋಗ, ಸೋಮಾರಿತನ, ಕಂತಿಳುವಳಿಕೆ, ಶಿಸ್ತಿನ ಅಭಾವ, ಸಂತಾನ ಬಹುಳತೆಗಳು ಇವುಗಳೊಡನೆ ಹಾಸುಹೊಕ್ಕಾಗಿವೆ.

ನಮ್ಮ ಬಾಲ್ಯದ Pen-friend ಒಬ್ಬನು ನಮಗೆ ಕಟಕ್ ನಗರದಿಂದ ಬರೆದ ಕಾಗದವೊಂದು ಈ ಸಮಸ್ಯೆಯ ಪರಿಚಯಕ್ಕೆ ಉತ್ತಮ ಪ್ರವೇಶ.

ಆಪ್ತ ಮಿತ್ರರೇ, ನನಗೆ ತಿಳಿದಿರುವುದು ಎರಡೇ ದ್ವಾರಗಳು. ಕ್ರಾಂತಿಕಾರಿಯಾಗುವುದು. ಪ್ರೇಮಿಸುವುದು.

ಒರಿಸ್ಸಾ ಬಡವರ ದೇಶ ಅತ್ತಿಯ ಮರದ ಹಣ್ಣುಗಳಂತೆ ನಾವು ಕಟಕ್ ನಗರದಲ್ಲಿ ಹೊಕ್ಕು ಸಿಕ್ಕಿದ್ದೇವೆ. ನನಗೆ ಓದಲು ಆಶೆ ;

ಮಹಾಕಾಂಕ್ಷೆಯಿಲ್ಲ. ಮಾರ್ಗವಿಲ್ಲ. ಅವಕಾಶಗಳು ಇಲ್ಲವೇ ಇಲ್ಲ.

ನಾನೊಬ್ಬ ಸೋಮಾರಿ ಕೊಳಕ ಬಂಗಾಳಿಗಳು ನಮಗಿಂತಲೂ ಕೊಳಕರು ಆದರ ಅವಕಾಶಗಳಿರುವುದೆಲ್ಲ ಅವರಿಗೇ ಆದುದರಿಂದ ನಾನು ಅವಳನ್ನು ಪ್ರೀತಿಸಲು ನಿರ್ಧರಿಸಿದ್ದೇನೆ ನೀವು ಅವಳನ್ನೊಮ್ಮೆ ನೋಡಬೇಕು

ನಾಳೆ ಪರೀಕ್ಷೆ. ಓದಿಲ್ಲ ಏನನ್ನೋದಲಿ ?

ನೀವು ಯಾರನ್ನು ಪ್ರೀತಿಸುವಿರಿ ?

ಎಂದು ನಿಮ್ಮ ವಿಶ್ವಾಸಿ,
ವಿನೋದಕುಮಾರ್
ಪಾಟ್ನಾಯಕ್.

ಅಂದ ಹಾಗೆ ಇಡೀ ಒರಿಸ್ಸಾದ ಜನತೆಯನ್ನು ಮೂರೇ ಗುಂಪುಗಳಾಗಿ ವಿಂಗಡಿಸಬಹುದು. ಪಾಟ್ನಾಯಕರು ಪುರಕಾಯಸ್ಥರು ಮತ್ತು ಮೊಹಾಂತಿಗಳು. ನೀವು ಭುವನೇಶ್ವರಕ್ಕೆ ಹೋದರೆ ಬೆಳಗಿನ ಉಪಹಾರವನ್ನು ಒಬ್ಬ ಪಟ್ಟನಾಯಕನೊಡನೆಯೂ, ಮಧ್ಯಾಹ್ನದ ಊಟವನ್ನು ಪುರಕಾಯಸ್ಥನೊಬ್ಬನೊಡನೆಯೂ ಸಂಜೆಯ ಚಹವನ್ನು ಮೊಹಾಂತಿಯ ಜೊತೆಗೂ ತೆಗೆದುಕೊಳ್ಳುವಿರಿ.

ಆದರೆ ಒರಿಸ್ಸಾದ ಬಹುಸಂಖ್ಯಾಕರಾದ ಪಟ್ಟನಾಯಕರೂ ಪುರಕಾಯಸ್ಥರೂ ಮೊಹಂತಿಗಳೂ— ಉಪಹಾರ, ಆಹಾರ, ಚಹಾ, ಕೊನೆಗೆ ರಾಗೀ ಹಲ್ವಗಳಿಗೂ ಗತಿಯಿಲ್ಲದೆ ಲಾಟರಿ ಹೊಡೆಯುತ್ತಿರುತ್ತಾರೆಂದು ಭಾವಿಸಿದರೆ ತಪ್ಪಾಗಲಾರದು. ನಿಮಗೆ ಹಾಗೆನ್ನಿಸದಿದ್ದರೆ ಮೇಲ್ಕಂಡ ಪತ್ರವನ್ನು ಓದಿ.

ಭುವನೇಶ್ವರ ಕಾಂಗ್ರೆಸ್ಸಿನ ಲೆಕ್ಕ ಪತ್ರಗಳನ್ನು ತಯಾರುಮಾಡದಿರುವುದಕ್ಕೆ ಈ ಸೋಮಾರಿತನವೇ ಮುಖ್ಯ ಕಾರಣವಿರಬೇಕು.

ಪಂಜಾಬಿನಲ್ಲಿ ಕೈರಾನ್ ಸರ್ಕಾರ ಉರುಳಿತು. ಕೇರಳದಲ್ಲಿ ಶಂಕರ್ ಸರ್ಕಾರ ಗೊಟಕ್ ಎಂದಿತು. ಒರಿಸ್ಸಾದಲ್ಲಿ ಒಂದೂವರೆ ವರ್ಷದಲ್ಲಿ ಇಬ್ಬರು ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟರು. ಬಹುಮತವಿದೆ. ಅದು ಇದ್ದುದರಿಂದಾದ ಪುರುಷಾರ್ಥವೇನು, ಎಂಬುದೇ ಒರಿಸ್ಸಾ ಸಮಸ್ಯೆಯಾಗಿರಬಹುದೇ ? ಸಂಪನ್ಮೂಲಗಳು ಹೇರಳವಾಗಿದ್ದರೂ ಅವು ಒದಗದಿರುವುದೇ ಒರಿಸ್ಸಾದ ಸಮಸ್ಯೆಯಾಗಿದ್ದೀತೆ ? ಬೀರೆನ್ ಮಿತ್ರರಿಗೆ ಒಂದೇ ರೂಪಾಯಿ ರೋಕಡಿಯೂ ದೊರೆಯದೆ ಹೋಗಿ, ಅದಕ್ಕಾಗಿ ಅವರು ತಮ್ಮ ಆಸ್ತಿಯನ್ನೇ ಕೊಡಲು ಸಿದ್ಧರಾದರಲ್ಲಾ ! ಹಲವಾರು ಜನ ಒಂದು ರೂಪಾಯಿ ಕೊಡಲು ಹೋದರೂ ಅದನ್ನವರು ಒಪ್ಪಿಕೊಳ್ಳಲಿಲ್ಲ. ಹುತ್ತದೊಳಗೆ ಹುತ್ತ ! ತಿಮಿಂಗಿಲದೊಳಗೆ ತಿಮಿ ! ನೆನೆನೆನೆದಂತೆ ಮುನ್ನಿನಳಲದೆ ತಾಂ ಪೊಸತಪ್ಪುದು !

ಪಶ್ಚಿಮ ಜರ್ಮನಿ ಸಹಾಯಮಾಡಲು ಮುಂದೆ ಬಂದಾಗ ಬಯಸಿ ಬಯಸಿ ಅದನ್ನು ಪಡೆದ ರೂರ್ಕೆಲಾದಲ್ಲಿ ಏನಾಯ್ತು ? ಷಟ್ ಡೌನ್, ತತ್ಪರಿಣಾಮವಾಗಿ ನಷ್ಟ. ದುರ್ನಾಮ. ನಿಮ್ಮ ಪ್ಲಾನೇ ಸರಿಯಿಲ್ಲ ಎಂದು ಜರ್ಮನರನ್ನು ದಬಾಯಿಸಿದರೆ ಅವರು "Verdamt! Donner and whetter; ನಾವು ಕಳಿಸಿದ ಪ್ಲಾನುಗಳನ್ನು ಅರ್ಥಮಾಡಿಕೊಳ್ಳಲು ನಿಮಗಾಗದಿದ್ದರೆ ನಾವೇನು ಮಾಡೋಣ" ಎಂದರು.

ಹಿಂದೂಸ್ತಾನ್ ಸ್ಟೀಲಿನ ಯಾವ ಡಿಸೈನಿಂಗ್ ಆಫೀಸಿನ ಮೇಲೆ ಈ ಅಪವಾದವನ್ನು ಹೊರಿಸುವುದು ?

ವಸ್ತುತಃ ಒರಿಸ್ಸಾದವರು ಕ್ರಾಂತಿ ಪ್ರಿಯರು. ಕೈಗಾರಿಕಾ ಕ್ರಾಂತಿಯಾಗಲೆಂದೂ. ಸಮಾಜವಾದೀ ಸಮಾಜಸ್ಥಾಪನೆಯಾಗಲೆಂದೂ ಹಾರೈಸಿದ ಅವರು ಸಮಾಜವಾದೀ ಸಮಾಜವನ್ನು ಬೆಂಬಲಿಸಿರಲಿಕ್ಕೆ ಸಾಕು.

ಆಗ ಏನಾಯ್ತು ? ಸೆರಾಜುದೀನ್ ಎಂಬ ಸಹಾಯಕ ತಾನಾಗಿಯೇ ಅವರಿಗೆ ಸಹಾಯಮಾಡಲು ಬಂದ   ದೊಡ್ಡದೊಂದು ಕ್ರಾಂತಿಯೇ ಸಂಭವಿಸಿತು.

ತಪ್ಪು ಯಾರದು ? ಪ್ರತಿಗಾಮಿಗಳದೇ ಹೊರತು ಪ್ರಗತಿ ಶೀಲರದಲ್ಲ. ತಮ್ಮ ವೈಯಕ್ತಿಕ ವ್ಯವಹಾರವನ್ನು ಪ್ರಶ್ನಿಸಲೇ ಬಾರದು. ಫಲಿತಾಂಶ ಸಮಾಜವಾದೀ ಸಮಾಜವಾಗಿರಬೇಕಾದರೆ. ಕೇವಲ ಸಾವಿರಾರು, ಲಕ್ಷಾಂತರ ರೂಪಾಯಿಗಳ ಹಸ್ತಾಂತರವಾದರೆ ಏನು ಮಹಾ. ಭಾರತದ ಇತರ ಪ್ರಾಂತಗಳನ್ನು ನೋಡಿ. ಸುಭದ್ರ ಸರ್ಕಾರ ರಚನೆಯನ್ನು ಮಾಡುವ ಘನೋದ್ದೇಶದಿಂದ ಯಾರ್ಯಾರು ಎಷ್ಟೆಷ್ಟು ಲಕ್ಷ ಹಣವನ್ನು ಪೋಲುಮಾಡಿದರು ! ಸಮಸ್ತ ಭಾರತದ ಸಮಸ್ಯೆಯೇ ಒರಿಸ್ಸಾ ಸಮಸ್ಯೆ.

ಹೊಸದೇನು ಬಂತು ಇಲ್ಲಿ. ರಾಗಿಯು ಹೊಟ್ಟು. ರೂಪಾಯಿಯ ನೋಟು ಇವಕ್ಕೆ ಬೆಲೆಯಾದರೂ ಎಲ್ಲಿದೆ.

ಇದನ್ನರಿಯದೆ ಬಡಪಾಯಿಗಳ ಮೇಲೆ ದಾಳಿಮಾಡಿದರೆ ಏನಂತೆ? ಹಣ, ಆಸ್ತಿಗಳನ್ನು ಕಳೆದುಕೊಂಡರೂ ಗಳಿಕೆಯ ವಿದ್ಯೆಯನ್ನು ಯಾರಾದರೂ ಕಸಿದು ಕೊಳ್ಳಲು ಸಾಧ್ಯವೆ. ತೆಗೆದುಕೊಳ್ಳಿರಯ್ಯಾ ರಾಜೀನಾಮೆ. ನಾಳೆ ಯಾರನ್ನು ಆ ಜಾಗಕ್ಕೆ ತರುವಿರೋ ನೋಡೋಣ.

ಇನ್ನೊಂದು ವಿಷಯವನ್ನು ಅರ್ಥಮಾಡಿಕೊಳ್ಳದೆ ಒರಿಸ್ಸಾ ಸಮಸ್ಯೆಯ ಪ್ರಥಮಾಧ್ಯಾಯವನ್ನು ಪ್ರವೇಶಿಸಿದಂತಾಗುವುದಿಲ್ಲ. ಅದೆಂದರೆ ವಿದ್ಯಾರ್ಥಿಗಳಲ್ಲಿ ಉದ್ಭವಿಸಿರುವ ಅಸಂತೃಪ್ತಿ. ವಿದ್ಯಾರ್ಥಿಗಳು ಏಕೆ ಅಸಂತೃಪ್ತರಾಗುತ್ತಾರೆ? ಪ್ರಾಥಮಿಕ ಶಾಲೆಯಿಂದಲೂ ಅವರಿಗೆ ಸರಿಯಾದ ಶಿಕ್ಷಣ ದೊರೆಯದಿದ್ದುದರಿಂದಲೇ, ಚಲಚ್ಚಿತ್ರ ಕಾದಂಬರೀ ಪ್ರಭಾವಗಳಿಂದಲೇ; ಅಧ್ಯಾಪಕ ವರ್ಗದ ಅಯೋಗ್ಯತೆಯಿಂದಲೇ; ಸರ್ಕಾರೀ ಹಸ್ತಕ್ಷೇಪದಿಂದಲೇ; ವಿರೋಧ ಪಕ್ಷಗಳ ಪ್ರಚೋದನೆಯಿಂದಲೇ; ಹರೆಯದ ಮಬ್ಬಿನಿಂದಲೇ; ಏತರಿಂದ? ಪೋಷಕರು ತಮ್ಮ ಹುಡುಗರ ಬಗೆಗೆ ಅನಾಸ್ಥೆ ವಹಿಸುವುದರಿಂದ ಹೊಣೆ ಅವರದೇ: ಎಂಬುದು ಸರ್ಕಾರೀ ವಲಯಗಳ ಮತ್ತು ಸರ್ವೋದಯ ಪಕ್ಷಪಾತಿಗಳ ಒಂದು ಉತ್ತರ.

ಸರ್ವೋದಯದ ಅಭಿಪ್ರಾಯಗಳನ್ನು ನಾವೀಗ ಪರಿಶೀಲಿಸಬೇಕಾಗಿಲ್ಲ. ಹೃದಯ ಪರಿವರ್ತನೆಯ ಅಡಿಗಟ್ಟಿನ ಮೇಲೆ ಸರ್ವೋದಯ ನಿಂತಿದೆ. ಔದುಂಬರ ಪುಷ್ಪವನ್ನೂ, ಶ್ವೇತವಾಯಸವನ್ನೂ, ಜಲದಲ್ಲಿ ಮತ್ಸ್ಯಪಾದವನ್ನೂ ನಾರೀ ಹೃದಯವನ್ನು ನೋಡಿದರೂ ನೋಡಬಹುದು. ಪರಿವರ್ತಿತ ಹೃದಯಗಳೆಲ್ಲಿವೆ? ಶೇಖ್ ಅಬ್ದುಲ್ಲಾ! ಮೈಕೆಲ್ ಸ್ಕಾಟ್! ಜೆ. ಪಿ.! ಅಯೂಬ್!

ಇನ್ನು ಸರ್ಕಾರೀ ವಲಯಗಳು! ಈ ಹುಡುಗರನ್ನು ಪಡೆದು ಪೋಷಿಸಿದ ಜನರೇ, ತಮ್ಮನ್ನಾರಿಸಿದವರೆಂದು ಅವು ಅರಿತಿವೆಯೇ? ಸರ್ಕಾರದ ಆಯ್ಕೆ, ಮಕ್ಕಳ ಪೋಷಣೆಗಳೆರಡಕ್ಕೂ ಸಮಾನಗಮನ ಕೊಟ್ಟಿರುವ ಪೋಷಕರೇ ಇವೆರಡಕ್ಕೂ ಜವಾಬುದಾರರು!

ಆದುದರಿಂದಲೇ ಏನೋ ಭುವನೇಶ್ವರ ಅಸೆಂಬ್ಲಿಗೆ ವಿದ್ಯಾರ್ಥಿಗಳು ನುಗ್ಗಿ ಗಲಭೆ ನಡೆಸಿದರೆಂದು ಹೇಳಲಾದ ಕಾಲದಲ್ಲಿಯೋ ಆ ಅಸೆಂಬ್ಲೀ ಭವನದ ಬಳಿ ನಿಂತಿದ್ದ ತಮಸಾ ಎಂಬ ನದೀ ದೇವತೆ

"ಸ್ಥಾನೇ ಖಲು ವಾಕ್ಯ ನಿವೃತ್ತಿಃ ಮೋಹಸ್ಯ!"

ಎಂಬಳಂತೆ "ಕೂಡಿದುದೂ ಝಾಡಿಸಿದುದೂ ಸರಿಯಾದ ಜಾಗದಲ್ಲೇ ಆಯಿತು" ಎಂದು ಅಪರರ್ಥ!

ಹೀಗಾಗಿ ಒರಿಸ್ಸಾದ ಸಮಸ್ಯೆ ಏನೆಂದು ಹೇಳಬೇಕೆಂದು ನಮಗೆ ತಿಳಿಯುತ್ತಿಲ್ಲ ನಾಯಕರ ಆಯ್ಕೆ, ಕಲಂಕ ರಹಿತ ಆಡಳಿತ, ರೂರ್ಕೆಲಾ ಗಲಭೆಗಳು, ರಾಗಿ ಹಲ್ವಾ

ಇವುಗಳಲ್ಲಿ ಏನಾದರೂ ಆಗಿರಬಹುದು. ನಮ್ಮ ಸಮಸ್ಯೆ ಈಗ ಸುಮಾರು 150 ಗ್ರಾಂ ತೌಡು 100 ಗ್ರಾಂ ಕಲ್ಲು ಬೆರೆತ 1 ಕಿ ಗ್ರಾಂ ಹಸಿರಾಗಿಯನ್ನು 68 ಪೈಸಾಗಳನ್ನು ಕೊಟ್ಟು, ಕೊಂಡು, ಬಾಳೇವು ಮಾಡುವುದು ಹೇಗೆ? ಎಂಬುದೇ ಆಗಿದೆ. ಆದುದರಿಂದ ನಾವು ಪ್ರಡಿ ಚಿಲ್ರಿಗೆ ಹೀಗೆಂದು ಕಾಗದ ಬರೆದೆವು.

ಗೆಳೆಯ.

ನೀನು ರಾಗಿ ಹಲ್ಲದ ಚಿಂತೆಯಲ್ಲಿರುವೆ ಆದರೆ ನಿನ್ನ ಕಳಿಂಗದ ಗೆಳೆಯರಾದ ಪಾಟ್ನಾಯಕರು, ಪುರಕಾಯಸ್ಥರು ಮತ್ತು ಮೊಹಾಂಗಿಗಳಿಗೆ ರಾಗಿ ಸಿಗುವುದೇ ಒಂದು ಸಮಸ್ಯೆಯಾಗಿದೆ.

ಬೀರೆನ್ ಮಿತ್ರರು ರಾಜೀನಾಮೆ ಕೊಟ್ಟಿದ್ದರೂ, ಅವರೇ ಆರಿಸಲ್ಪಡಬಾರದೇಕೆ? Consider her who bowed down to the feet of the good old husband

ಒರಿಸ್ಸಾದ ಸಮಸ್ಯೆಗೆ ಇರುವ ಪರಿಹಾರ ಒಂದೇ. ರಾಗಿಯನ್ನು ನಿನ್ನ ಸಹ ಪೌರರಿಗೆ ಮಾರ್ಕೆಟ್ ದರಕ್ಕೆ ಮಾರಿಬಿಟ್ಟು ಅಕ್ಕಿಗಾಗಿ ನಿನ್ನ ಮನೆಯ ಪಕ್ಕದಲ್ಲೇ ಇರುವ ಕನ್ಸ್ಯೂಮರ್ ಕೋ–ಆಪರೇಟಿವ್ ಸೊಸೈಟಿಯನ್ನು ಮೊರೆಹೊಗು.

ಎಂದು ನಿನ್ನ.

ಅ ರಾ. ಸೇ.

ಹಿಂದಿನಿಂದ.

ಕ್ರೆಮ್ಲಿನ್ನಿನ ಸೂಪರ್ N. ಬಾಂಬಿನ ಆಶೆ ಬಿಡು. Com. K ಅದನ್ನು ಹೇಳಿದಾಗ ಅತಿಶಯೋಕ್ತಿಯನ್ನು ಅಲಂಕಾರಕ್ಕೆ ಉದಾಹರಣೆಯನ್ನು ನೀಡುತ್ತಿದ್ದ,

ಎಂದು ನಿನ್ನ ಗೆಳೆಯ.



“ಸದ್ಯ ಗೋಡೌನ್ ಖಾಲಿ ಆಗುತ್ತೆ ನಾಳೆ. ಪೋಲಿಸ್ನೋರು ಬಂದ್ರೆ ಹೆದರಿಕೆ ಇಲ್ಲ.”

ಗೇಕೆ

ಮಂತ್ರಿಯಾಗದ ಮನುಜ ಜನುಮ ನಮಗೇಕೆ । ಪ ।
ಕಂತ್ರಿಪುಡಾರಿ ಬಾಲಂ ಗೋಂಚಿಯಾಗದಿರಲಿಕ್ಕೆ ॥ ಅ ॥ ಪ ॥

ಮಾತು ಹೊಸೆಯುವ ಮಂಕ ಟೋಪಿ ನೆರಳಿನಲಿ ।
ಆತು ಅಧಿಕಾರವನು ಮೆರೆಯುತಿರುವಾಗ ॥
ಕೂತು ದೋಸೆಯ ಹೊಯ್ದು ಒಲೆಯನ್ನು ಬೈಯುತ್ತ ।
ಬೆಂದ ದೋಸೆಯ ತಾನು ಮೊದಲು ತಿನ್ನುತಲಿರುವ ॥ ೧ ॥

ಲಂಚವನು ಕಬಳಿಸುತ ಹೆಂಡತಿಯ ಹೆಸರಿನಲಿ ।
ಮಂಚದಂಚನು ಸರಿಗೆ ಅಂಚಿನಲ್ಲಿ ಮೆರೆಸುವ ॥
ಸಂಚ ಅರಿತಧಿಕಾರಿ ಮಿಂಡ ಮಂತ್ರಿಯ ನರಿತು ।
ಹಂಚಿಕೊಳ್ಳುವ ಜಾಣ ಸಹಬಾಳ್ವೆ ನಡಸುವ ॥ ೨ ॥

ಉಂಡು ಅರಗಿಸಿಕೊಳದ ಪಾಪಿ ಬಾಳೇಕೆ ।
ಬೆಂದ ಮನೆಯಲಿ ತಾನು ಹಿರಿಯದಿರಲೇಕೆ ॥
ಗಂಡು ಬಾಳನು ನಡೆಸಿ ಸಂದಿ ಸಂದಿಯ ತಿರುಗಿ ।
ಕಂಡಿ ಕಂಡಿಯಲೂಸೂ ಕನಕವನೆ ತುಂಬಿಡುವ ॥ ೩ ॥

—ಸಿಂಹ

ಕೆಲವು ಕಳ್ಳರು ಮಾನಸಿಕ ಪರಿವರ್ತನೆಯಾಗಿ ಆನಂತರ ದಿನಸಿ ಅಂಗಡಿಗಳನ್ನು ಇಟ್ಟರಂತೆ

—ಮಿಕ್ಕವರು ದಿನಸಿ ಅಂಗಡಿಗಳನ್ನು ಇಟ್ಟರು.

* * * *

ಕೋತಿ ವ್ಯಾಪಾರವೆಲ್ಲಾ ಸರಕಾರಕ್ಕೇ ಮೀಸಲು (ಪತ್ರಿಕೆ)

ಅಂದರೆ ಕೋತಿಗಳ ರಫ್ತಿನ ವ್ಯಾಪಾರ ಅಂತ ತಿಳಿದುಕೊಳ್ಳಬೇಕು.

ಬೆಕ್ಕಿನ ಜ್ವರ-ಎತ್ತಿಗೆ ಬರೆ

★

ಮಾಸ್ತರು ಮಾದೇವಯ್ಯನವರ ಸ॥ ಕ್ಕೆ

ನಿಮ್ಮ ಸ್ಕೂಲಿನ ಆರನೇ ತರಗತಿಯಲ್ಲಿ ಮೂರನೆ ಸಲ ಫೇಲ್ ಆಗುತ್ತಿರುವ ಬಾಲಕ ಬಾಲಕೃಷ್ಣಯ್ಯನ ತಂದೆಯಾದ ವಾಸುದೇವಯ್ಯನು ಬರಿಯುವುದೇನೆಂದರೆ–

ನೀವು ಇತ್ತೀಚೆಗೆ ನಮ್ಮ ಘನ ಸರ್ಕಾರದವರು ವಿದ್ಯಾ ಮಂತ್ರಿಗಳ ಮೂಲಕ ಆಗಿಂದಾಗ್ಗೆ ಅನೇಕ ಹೇಳಿಕೆಗಳನ್ನೂ–ಇಲ್ಲದಿದ್ದರೆ ಸ್ವಯಂ ಮುಖ್ಯ ಮಂತ್ರಿಗಳೇ ಪತ್ರಿಕೋದ್ಯಮಿಗಳ ಗುಂಪಿನಲ್ಲಿಯೇ ಹೇಳುತ್ತಲೇ ಬಂದಿದ್ದಾರೆ–ಹುಡುಗರು ಉತ್ತೀರ್ಣರಾಗದಿದ್ದರೆ ಅವರ - ಮೇಷ್ಟರನ್ನು ಬಲಿಹುಯ್ಯಬೇಕೂಂತ. ನನಗೆ ಇದು ಹೊಳೆದೇ ಇರಲಿಲ್ಲ. ನಮ್ಮ ಹುಡುಗನೇ ದಡ್ಡನಿರಬೇಕೂಂತ ಉದಾಸೀನನಾಗಿ ಎಂದಾದರೊಮ್ಮೆ ಪಾಸು ಆದಾನು ಎಂಬ ನಂಬಿಕೆಯಿಂದ ಶಾಲೆಗೆ ಅಟ್ಟುತ್ತಿದ್ದೆ.

ಆದರೆ ಈ ಹಿರಿಯ ಜನಪ್ರಿಯ–ಜನಾನುರಾಗಿ–ಜಾಣತನದಿಂದ ರಾಜ್ಯವಾಳುತ್ತಿರುವ ನಮ್ಮ ಮಂತ್ರಿಗಳು ಹುಡುಗರದೇನೂ ತಪ್ಪಿಲ್ಲ. ಮಾಸ್ತರುಗಳನ್ನೇ ತರಾಟೆಗೆ ತೊಗೋಬೇಕು ಅಂತ ಹೇಳಿದಮೇಲೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳದೆ ಬೇರೇ ಮಾರ್ಗವೇ ಇಲ್ಲವಾಗಿದೆ.

ನಾನೆ ಮನೆಯಲ್ಲಿ ಪಾಠ ಹೇಳಿಕೊಟ್ಟೋ ಅಥವ ನಿಮ್ಮ ಕೈಲೇ ಪುರುಸೊತ್ತು ಮಾಡಿಕೊಂಡು ಹುಡುಗನಿಗೆ ಮನೆ ಪಾಠ ಹೇಳಿಸಿಯೋ ಪ್ರಯತ್ನಿಸಿದ್ದರೆ ಹುಡುಗ ಪಾಸಾಗಬಹುದಿತ್ತೇನೊ ಆದರೆ ನನಗೆ ಪುರುಸೊತ್ತೆಲ್ಲಿಂದ ಬಂತು? ಬೆಳಿಗ್ಗೆ ಗೋಡೌನಿಗೆ ಹೋದರೆ ಹಿಂದೆಲ್ಲ ಇದ್ದ ಅಕ್ಕಿ ಮೂಟೆ ಹಾಗೇ ಇವೆಯೇ? ಬರೀ ಬೂಸಾ ಮೂಟೆ ಮುಂದೆ ಕಾಣುವಂತೆ ಮರೆಮಾಡಿ ಇಟ್ಟಿದ್ದು ಸಾಕೇ? ಬೆಜವಾಡದ ಲಾರಿ ಬಂತೆ? ಬಂದಿರೋ ಲಾರಿ ಅರಸೀಕೆರೆಗೆ ಕಳಿಸಬೇಡವೆ? ಸಾವಿರ ಸಮಸ್ಯೆ ನೂರು ಯೋಚನೆ. ನಮ್ಮ ಯಜಮಾನ್ರು ಸಾವುಕಾರ್ರು ಬಹಳ ಶಿಸ್ತಿನವರು. ಅವರ ಉಪ್ಪು ತಿಂದ ನಾನು ಅವರ ಅಚ್ಚುಕಟ್ಟು ವ್ಯಾಪಾರಕ್ಕೆ ಅಪಾಯ ಬರದಂತೆ ನಿಯತ್ತಿನಿಂದ ದುಡಿಯುವುದೇ ನನ್ನ ಕೆಲಸ

ನಿಮ್ಮ ಮಾಸ್ತರಗಿರಿ ಹಾಗೆ. ನಾವು ಈ ಜವಾಬ್ದಾರಿಯುತ ರೂಪಾಯಿ ಪೈಸಾದ ವ್ಯವಹಾರವನ್ನು ಮಾಡಿದರೆ ನಮ್ಮ ಹುಡುಗನ ಹಾಗೇ ನಮ್ಮ ಯಾಪಾರವೂ

ಫೇಲ್ ಆಗಿ ಹೋಗುತ್ತದೆ, ನಿಮ್ಮನ್ನ ಕೆಲ್ಸದಿಂದ ತೆಗಿಯಾಕೆ ಯಾರಿಂದ್ಲೂ ಸಾಧ್ಯ ವಿಲ್ಲ. ಆದ್ರೆ ನನ್ನ ಕೆಲಸ ನಾಯಿತಲೆ ಮೇಲಿನ ಬುತ್ತಿ ಸಾಹುಕಾರ್ರು "ವಾಸೂೂ ನೀನು ನಾಳಿಂದ ಬರಬ್ಯಾಡ" ಅಂದ್ರೆ ತೀರ್ತು. ಹುಡುಗನ ಫೀಸಿಗೆ ಎಲ್ಲಿಗೆ ಹೋಗಲಿ?

ವಿಷಯ ಯಾತಕ್ಕೆ ಬಂತೂಂದ್ರೆ ನಿಯತ್ತು, ಉಪ್ಪಿಟ್ಟ ಧಣಿಗೆ ಎರಡು ಬಗೆಯ ಬಾರದು ಅನ್ನೋದಕ್ಕೆ ಹೇಳಿದೆ. ನಾವು ಹಗಲೂ ರಾತ್ರಿ ಬೇಳೆ, ಸಕ್ಕರೆ, ಎಣ್ಣೆ, ಬೆಣ್ಣೆ, ಕಾಳು ಕಡ್ಡಿ ಚೀಲಗಳ ನಡುವೆ ಸತ್ತು, ಲೆಕ್ಕಾನೂ ಬರ್ದು, ಇನ್‌ಕಂಟ್ಯಾಕ್ಸು ಉಳಿಯೋ ಹಂಗೆ, ಸೇಲ್ಸ್ ಟ್ಯಾಕ್ಸೂ ಮಿಗೋ ಹಂಗೆ ಲೆಕ್ಕ ಬರೆದು ದುಡಿಯೋ ದಿಲ್ಲವೆ ? ಧರ್ಮ ಕರ್ಮ ದಣೀಗೆ ಬಿಟ್ಟಿದ್ದು. ಪಾಪ ಪುಣ್ಯಾತ್ಮ ರಾತ್ರಿ ಹನ್ನೊಂದರ ಮೇಲೆ ಯಾವತ್ತೂ ಅಂಗಡೀಲಿ ನಿಲ್ಲಿಸಿಕೊಂಡಿಲ್ಲ, ನನಗೇನಾರ ತಲೆನೋವು ಬಂದ್ರೆ ಕಾಫಿ ತರಿಸಿಕೊಡ್ತಾನೆ. "ಅಯ್ಯೋ ಪಾಪ ವಾಸಪ್ಪಾ ..ಎಂಥಾ ಒಳ್ಳೇ ತಲೆ ನಿಂದೂ. ಅಂಥ ತಲೆಗೆ ನೋವು ಬಂತೇಪ್ಪ...ಅಂತ ಅಯ್ಯೋ ಪಾಪ ಹೇಳ್ತಾನೆ" ಬಿಸಿಲು. ಮನೆಗೆ ಹೋಗಬ್ಯಾಡ ಹಂಗೇ ಆ ನೆಲ್ಲೂರು ಮಿಲ್ಲಿನ ಲೆಕ್ಕ ನೋಡು " ಅಂತ ಉಪ ಚಾರ ಹೇಳ್ತಾನೆ.

ಹಾಗೆಯೇ—ಸರ್ಕಾರದ ಉಪ್ಪು ತಿಂದು ಕೆಲಸ ಮಾಡ್ತಿರೋರು ನೀವು ವರ್ಷ ದಾಗೆ ಇರೋ ಮುನ್ನೂರಾ ಅರವತ್ತಾರು ದಿನದಾಗೆ —52 ದಿನ ಭಾನುವಾರ ರಜಾ ...ಇನ್ನು ಉಳಿದಿರೋ 314 ದಿನದಲ್ಲಿ ದಸರಾ ರಜಾ ಕ್ರಿಸ್‌ಮಸ್ ರಜಾ, ಬೇಸಿಗೆ ರಜಾ ಸೇರಿ ಏನಿಲ್ಲಾಂದ್ರು ಅರವತ್ತು ಎಪ್ಪತ್ತು ದಿನ ಹೋಗಿಬಿಡುತ್ತೆ. ಇನ್ನು ಉಳಿದ ಇನ್ನೂರ ನಲವತ್ನಾಕು ದಿನದಲ್ಲಿ ಜನವರಿಯ ನ್ಯೂ ಇಯರ್ಸ್ ದಿನದ ರಜ ದಿಂದ ಡಿಸೆಂಬರ್ ತನಕ ಕಾಮನ ಹುಣ್ಣಿಮೆ ಭೀಮನ ಅಮಾವಾಸ್ಯೆ, ಕ್ರೈಸ್ತರಜ ಸಾಹೇಬರ ರಂಮ್‌ಜಾನ್ ಅಂದ್ಕೊಂಡು ಸರಾಸರಿ ಇಪ್ಪತ್ತು ದಿನ ನಿಮ್ಮ ಸ್ಕೂಲು ನಡಿಯಲ್ಲ ಆಯ್ತೇ ಇನು ಉಳಿದಿರೋದು 224 ದಿನ ಉಳಿದವು. ಇದರಲ್ಲಿ ಫೀಸು ನಿಮ್ಮ ರಜಾ ಹುಡುಗರ ಹರತಾಳ ಲಾಠಿ ಚಾರ್ಜಿಗೆ ಸಂತಾಪ ಸೂಚಕ ರಜ ಕ್ರಿಕೆಟ್ ಮ್ಯಾಚು ಪ್ರೆಸಿಡೆಂಟರ ಆಗಮನ ಅಂತ ಸಲೀಸಾಗಿ ಹತ್ತು ದಿನ ರಜಾ ಮಜಾ ಹಾಕಿದರೆ ಇನ್ನು 214 ದಿನ ಉಳಿದವು ಇದರಲ್ಲಿ ಫೀಸು ವಸೂಲಿ ದಿನ ಪಾರ್ಇಲ್ಲ ಅದರ ಜಾಬತ್ತು ಮಜಾ ಮಾಸ್ತರುಗಳ ಮೀಟಿಂಗು ಡಿ ಇ ಓ ಗಳ ಆಗಮನ ಮಗಾ ಮಗಿ ಮುನ್ನು ಮುಸಿ ಅಂತ ರಜಗಳು ಬಂದೇ ಬರುತ್ತವೆ ಸ್ಕೂಲ್ ಡೆ. ಪ್ರಾರಂಭ ಪ್ರಾರ್ಥನಾ ಸ್ವಾತಂತ್ರ್ಯ ಸಮಾರಂಭ ನಾಟಕಸ್ಪರ್ಧೆ ಪಾರಕ್ಕೆ ದಿನಗಳಲ್ಲಿ ? ಯೋಚನೆ ಮಾಡಿ ನೋಡಿ ಪಾಪ ನಿಮಗೂ ತೊಂದ್ರೆ ಇದೆ ನಿಜ. ಖಾಸಗಿ ಸ್ಕೂಲಾದರೆ ನೂರಕ್ಕೆ ನ್ಯೂಸು ಹಾಕಿದರೆ ಐವತ್ತು ಕೈಗಿಕ್ಕಿದರೆ ಪುಣ್ಯ ಇನ್ನು ಸರ್ಕಾರಿದಾದರೆ ವರ್ಷ ವರ್ಷ ಸಹಾನುಭೂತಿಯಿಂದ ಪರಿಶೀಲಿಸಿ ಸಂಬಳ ಹೆಚ್ಚು ಮಾಡ್ತೇವೋ ಬಿಡೋದೊ ಅಂತ ಮಂತ್ರಿಗಳೂ ಶಾಸಕರೂ ನಿಮ್ಮ ಬಗ್ಗೆ ಬಹಳ ಹೋರಾಡಿಕೊಂಡು ವರ್ಷಗಳನ್ನು ತಳ್ಳುತ್ತಿದ್ದಾರೆ. ಕಡೆಗೆ ಏನು ಮಾಡುವುದು ? ಎಂದು ತಮ್ಮ

ಜಾಣತನದ ಯೋಚನೆಯಿಂದ ಯೋಚಿಸಿ ಹುಡುಗರು ಫೇಲಾದರೆ ಮಾಸ್ತರನ್ನೇ ಗಲ್ಲಿಗೆ ಹಾಕಿದರೆ ಸರಿಹೋಗುತ್ತದೆ ಎಂಬ ಘನವಾದ ತೀರ್ಮಾನಕ್ಕೆ ಬಂದಿದ್ದಾರೆ ಹೆಚ್ಚು ಮಂದಿ ಇವರುಗಳೇ ಬುದ್ಧಿವಂತರೆಂದು ಓಟು ಕೊಟ್ಟು ತೀರ್ಮಾನ ಮಾಡಿದ ಮೇಲೆ ಅವರು ಜಾಣರೇ ಇರಬೇಕು. ಇಲ್ಲದಿದ್ದರೆ ಇಂತಹ ಸೊಗಸಾದ ತೀರ್ಪು ಕೊಡುತ್ತಿದ್ದರೆ ? ಇಲ್ಲ.

ಪತ್ರ ದೀರ್ಘವಾಗುತ್ತಿದೆ ನಿಜ. ಅದರೇನು ಮಾಡಲಿ ಇರೋವಿಷಯ ತಿಳಿಸಲೇ ಬೇಕಷ್ಟೆ. ನಮ್ಮ ಮಂಡಿ ವಕೀಲರನ್ನ ವಿಚಾರಿಸಿದೆ. ಕಾನೂನು ನನ್ನ ಕಡಿಗೇ ಇದೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಹುಡುಗನ ಆಯಸ್ಸು ಮೂರು ವರ್ಷ ಒಂದೇ ತರಗತಿಯಲ್ಲಿ ಕಳೆಯುವಂತೆ ಮಾಡಿರುವುದಕ್ಕೆ ಷೋಕಾಸ್ ನೋಟೀಸ್ ಕೊಡ ಬಹುದಂತೆ. ವೃಥಾ ಕೋರ್ಟು ಕಚೇರಿ ವ್ಯವಹಾರ ನಿಮಗೆ ಗೊತ್ತೇ ಇದೆ. ಹುಡುಗ ನನ್ನು ಸುಮ್ಮನೆ ಮುಂದಿನ ಕ್ಲಾಸಿಗೆ ತಳ್ಳಿಬಿಟ್ಟರೆ ಯಾವ ತೊಂದರೆಯೂ ಇರುವುದಿಲ್ಲ. ಮಾದೇವಯ್ಯನವರೇ ನಿಮ್ಮ ಕೊರಳಿಗೆ ನೀವೇ ಉರ್ಲು ಹಾಕಿಕೊಂಡ ಹಾಗೆ ಯಾಕೆ ಯಾರನ್ನಾದರೂ ಫೇಲ್ ಮಾಡ್ಸಿ ನೀವೇ ಶಿಕ್ಷೆಗೆ ಗುರಿ ಆಗಬೇಕು ? ನನ್ನ ಮಾತು ಕೇಳಿ ಮೊದಲು ಆ ಬಾಲಕೃಷ್ಣನ್ನ ಮುಂದಿನ ಕ್ಲಾಸಿಗೆ ತಳ್ಳಿ.

ಪುರುಸೊತ್ತಿದ್ದರೆ ಸಂಜೆ ಹಾಗೇ ಮಂಡಿ ಕಡೆ ಬನ್ನಿ ಸಕ್ಕರೆ ಕಂಟ್ರೋಲ್ ರೇಟಿಗೆ ಕದ್ದುಕೊಡುತ್ತೇನೆ. ಅಕ್ಕಿಯೂ ಸಿಕ್ಕೀತು. ಏಳೂವರೆಯೊಳಗೆ ಬಂದುಬಿಡಿ. ಆಮೇಲೆ ಧಣಿ ಬಂದುಬಿಡ್ತಾನೆ ನಿಮಗೆ ಸಹಾಯ ಮಾಡಲಿಕ್ಕೆ ಕಷ್ಟ ಆಗುತ್ತದೆ.

ಬಾಲಕೃಷ್ಣನ ಭವಿಷ್ಯ ನಿಮ್ಮ ಕೈಲಿದೆ. ಹೆಚ್ಚಿಗೆ ಏನು ಬರೆಯಲಿ ?

ಇತಿ ನಿಮ್ಮವ,
ವಾಸುದೇವಯ್ಯ.

ಶ್ರೀ ವಾಸುದೇವಯ್ಯನವರಿಗೆ—

ಸೆಕೆಂಡ್ ಹ್ಯಾಂಡ್ ಏಯ್‌ಡೆಡ್ (ಏಯ್ ! ಡೆಡ್ಡೆ ?) ಸ್ಕೂಲಿನ ನಿರ್ಭಾಗ್ಯ ಮಾಸ್ತರು ಮಾದೇವನ ಶರಣಾರ್ತಿಗಳು.

ಅಯ್ಯಾ ! ನಿನ್ನ ಮಗನ ಮುಖಕ್ಕೆ ಮಂಗಳಾರತಿ ಎತ್ತಿದರು. ಬೆಳಗಾ ಗೆದ್ದು ಅವನ ಮುಸುಡು ತೊಳೆದು ಕಳಿಸಲಿಕ್ಕೆ ನಿಮಗೇನು ಬಂದಿದೆ ಬ್ಯಾನೆ ? ಸಾಕ್ಷಾತ್ ಸರಸ್ವತಿಯೇ ಬಂದೂ ಇವನಿಗೇನೂ ಮಾಡಲಿಕ್ಕೆ ಆಗಲ್ಲ. ಇವನ ನಾಲಿಗೆ ತಲೆ ಎರಡನ್ನೂ ಬದಲಾಯಿಸಿದರೆ ಆಗ ಪ್ರಯತ್ನಿಸಬಹುದು.

ಅಲ್ರೀ ಮಿನಿಸ್ಟ್ರು ಶಾಸಕರ ಮಕ್ಕಳೇ ಇರ್ಲಿ ಯೋಗ್ಯತೆ ಇದ್ರೇ ಪಾಸಾಗಲಿ ಅನ್ನೋ ನೇಮ ನೀತಿ ಇಟ್ಟಿರೋ ಈ ಶಾಲೆಯೊಳಗೆ ನಿಮ್ಮ ಬೆದರಿಕೆಗೆ ಬೆಲೆಯೇ ಇಲ್ಲ.

ಈಗಾಗಲೇ ನನ್ನದೇ ಮುಖ್ವಾಲು ಸರ್ವೀಸು ಮುಗೀತು, ಈಗ ನಿಮ್ಮ ಹುಡುಗ ಫೇಲಾದಾಂತ ಜೈಲಿಗೆ ಕಳಿಸಿದರೆ ನನ್ನ ಅನ್ನದ ಪ್ರಶ್ನೆಯೇ ಬಗೆಹರಿದಂತೆ ಆಯ್ತು. ದಯವಿಟ್ಟು ನೀವು ಆ ಸಮಸ್ಯೆಯನ್ನು ಬೇಗ ಪರಿಹರಿಸಿ ಕೊಟ್ಟರೆ ನಿಮಗೆ ಚಿರಋಣಿ.

ಇನ್ನು ಶಾಲೆ ನಡೆಯುವ ದಿನಗಳನ್ನು ನೀವೇ ವಿವರವಾಗಿ ಲೆಕ್ಕ ಹಾಕಿದ್ದೀರಿ. ಕಲಿಯೋ ಹುಡುಗರು ಅಷ್ಟರಲ್ಲೇ ನೂರಕ್ಕೆ ತೊಂಬತ್ತು ತೆಗೆಯೋಲ್ಲವೆ ? ನಿಮ್ಮ ಬಾಲಕೃಷ್ಣನಿಗೆ ಮುನ್ನೂರ ಅರವತ್ತಾರು ದಿನವೂ ಹಗಲೂ ರಾತ್ರಿ ಹೊಡಕೊಂಡ್ರು ಅವನ ತಲೆಗೆ ಏನೂ ಇಳಿಯೊಲ್ಲ " ಭೋರ್ಗಲ್ಲಮೇಲೆ ನೀರ್ಕರೆಯಲಾಕಲ್ಲು ನೀರ್ಕೊಂ ಬುದೇನೋ ಸರ್ವಜ್ಞ" ಅನ್ನೊ ಪದ್ಯ ನೆನಪಿಗೆ ಬರುತ್ತೆ ನಿಮ್ಮನ್ನೂ ನಿಮ್ಮ ಮುದ್ದು ಕುಮಾರ ಕಂಠೀರವನನ್ನೂ ನೋಡಿದಾಗ.

ಇನ್ನೂ ಧಣಿ ನಿಯತ್ತುಗಳ ವಿಚಾರ ಅದನ್ನ ನಾವು ನಾವು ನಮ್ಮ ಅಂತರಂಗದ ಹತ್ತಿರ ತುಮುಲ ಚರ್ಚೆ ಮಾಡಿ ಸಮಾಧಾನ ಮಾಡಿಕೊಳ್ಳಬೇಕಾಗಿರುವುದಲ್ಲದೆ ನಿಮ್ಮಂತಹ ಸೆಕೆಂಡ್ ಹ್ಯಾಂಡ್ ಕಳ್ಳಲೆಕ್ಕದ ಮಂಡಿ ಗುಮಾಸ್ತೆಗೆ ಇದರ ಬಗ್ಗೆ ಮಾತಾಡೋ ಹಕ್ಕೇ ಇಲ್ಲ.

ಎಲೈ ವಾಸುವೇವ—ನಿನ್ನ ಹುಡುಗನನ್ನ ಸಾಲೆಯಿಂದ ಓದು ಬಿಡಿಸಿ, ದಾರೀ ಅಂಚಿನಲ್ಲಿ ವಡೆ ಕರಿಯೋಕೆ ಹಾಕು. ಹುಡುಗ ಉದ್ಧಾರ ಆಗ್ತಾನೆ. ಓದು ಅಂದ್ರೆ ನಿನ್ನ ಬುದ್ಧಿಯ ಅವನೇನು ಓದಿಯಾನು ಅವನ ತಲೆ !

ಕೋರ್ಟು, ಕಚೇರಿ, ಘೋಡ ಹೈ ಮೈದಾನ್ ಹೈ. ಸೊಕ್ಕಿದ ತಲೆಗೆ ಕೋರ್ಟೇ ಗತಿ, ಕೂಡಲೇ ಅದೇನು ಮಾಡ್ತೀಯೋ ಮಾಡ್ಕೋ. ಜಗತ್ತಿನಲ್ಲಿ ಯಾವನೇ ಆಗಲಿ ಬಂದು ನಿನ್ನ ಮಗನ ದಡ್ಡತನಕ್ಕೆ ನಾನೇ ಕಾರಣ ಅಂತ ರುಜುವಾತು ಮಾಡಲಿ ನಾನು ಈ ಪವಿತ್ರವಾದ ವಿದ್ಯಾ ದಾನದ ಕೆಲಸ ಬಿಟ್ಟು, ದುರ್ದಾನ ತೆಗೆದು ಕೊಂಡಂತೆ ಮಂಡಿ ಸೇರಿ ಲೆಕ್ಕ ಬರೆದುಬಿಡುತ್ತೇನೆ.

ದನ ಕಾಯೋನೆ—ನಿನ್ನ ಯೋಗ್ಯತೆ ಏನು—ನಾನೇನು...ಸಾಕು ನಿನ್ನ ತಲೆ ಹರಟೆ ನಿಂತರೇ ಸರಿ, ಇಲ್ಲವೇ ತಂದೆ ಮಕ್ಕಳಿಬ್ಬರನ್ನೂ ಏಕ್ಲಾಸಿಗೆ ತಳ್ಳಿಬಿಟ್ಟೇನು ಹುಷಾರ್...

—ಮಾದೇವಯ್ಯ.

—ದಾಶರಥಿ ದೀಕ್ಷಿತ್.

ನವ್ಯ ಗಾದೆಗಳು

ಲಾಕರದ್ದು

ಕೊಟ್ಟಿದ್ದು ಕೈಗೆ ಉಳಿಯಿತು. ಮುಚ್ಚಿಟ್ಟದ್ದು ಮುಂಡ ಮೋಚಿಕೊಂಡಿತು.

* * * *

ಕಾವಲು ಚೆನ್ನಾಗಿದೆ ಅಂತ ಬ್ಯಾಂಕಿನಲ್ಲಿಟ್ಟರೆ
ಲಾಕರೇ ಎದ್ದು ಹಣ ಮೇಯ್ದರೆ ?

* * * *

ಕಳಕೊಂಡ ತಾರೆಯರೆಲ್ಲ ತಾರಮ್ಮಯ್ಯ ಆಡಿದರಂತೆ.
—ಎಲ್ಲೀದು ಹಣ ಅಂದಾಗ.

* * * *

ಬೀದಿ ಪಿಂಡ ಕತ್ತಲಲ್ಲಿ ಕೊಟ್ಟಿದ್ದನ್ನ
ಮನೆಗಂಡ ಕಬಳಿಸಿಬಿಡೋದೇ ?

* * * *

ತೆರಿಗೆ ಅಧಿಕಾರಿ ಮುತ್ತು ಕೊಟ್ಟರೂ ಮೈ ಉರಿಯುತ್ತೆ.

* * * *

ತಾರೆ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕತೆ ಕಟ್ತಾರೆ.

* * * *

ತಾರೆಯಂತೆ ತಾಯಿ, ಹಿತ್ತಲಬಾಗಿಲಲ್ಲೇ ನುಣುಚಿಕೋತಾಳೆ.

* * * *

ತಾರೆ ನೋಡಿ ಲಾಕರ್ ಹುಡುಕು, ಹುತ್ತ ನೋಡಿ ಹಾವು ಹುಡುಕು.

* * * *

" ಪುರಾಣ ಹೇಳ್ತಾ ರಾಷ್ಟ್ರನಿಧಿಗೆ ಕೂಡಿಸು.
ಬದನೆಕಾಯಿನೆಲ್ಲ ಲಾಕರಿನಲ್ಲಿ ಹುದುಗಿಸು.

* * * *

ತಾರೆ ತೆರೆಯಮೇಲೆ ಅತ್ತಾಗ ಅಯ್ಯೋ ಅನ್ನಿಸಿತು.
ದಿಟವಾಗಲೂ ಅತ್ತಾಗ ಒದ್ದುಬಿಡೋಣ ಅನ್ನಿಸಿತು.

* * * *

ಬ್ಯಾಂಕಿನಲ್ಲಿ ಬೈದ—ಒಳಕೋಣೇಲಿ ಸಂತೈಸಿದ.

★ ★ ಪುಸ್ತಕ ವಿಮರ್ಶೆ ★ ★

— ಗಾಂಪರ ಗುಂಪು —

ಲೇಖಕ:

ದಾಶರಥಿ ದೀಕ್ಷಿತ್

ಪ್ರಕಾಶಕರು:

ಸ್ಟ್ಯಾಂಡರ್ಡ್ ಬುಕ್ ಡಿಪ್ಪೋ
ಅವೆನ್ಯೂ ರೋಡ್, :: ಬೆಂಗಳೂರು

ಪುಟ ೨೪೭ — ಬೆಲೆ ರೂ. ೨–೫೦

ಪ್ರಸ್ತುತ 'ಗಾಂಪರ ಗುಂಪು' ಮೂವತ್ತಾರು ತಿಂಗಳುಗಳು ಸತತವಾಗಿ ಕೊರವಂಜಿಯ ಸೆರಗಿನಲ್ಲಿ ಮುಸುಗು ಹಾಕಿ ಮೂಗುಕೆರೆವ ತುಂಟು ಮಗುವಾತೆ ಆಟಆಡಿದೆ ಗುರುಗಳು, ಮಂಕ, ಮಡೆಯ, ಮುರ್ಾಳ, ಮರುಳ, ಮಡ್ಡಿಗಳು ಇಂಗ್ಲೆಂಡಿಗೆ ಹಾರಿಹೋಗಿ ಅಲ್ಲಿನ ವಿವಿಧ ಜಾಗ, ಹೋಟಲು, ಬೈಲು, ಜನ, ನದಿ, ಸೇತುವೆ, ಚರ್ಚುಗಳನ್ನು ಸಂದರ್ಶಿಸಿ ಹಿಂದಿರುಗಿದ ಪ್ರವಾಸ ಕಥನವನ್ನು ನಕ್ಕು ಪಕ್ಕೆಲುಬುಗಳು ಮುರಿದುಬೀಳುವ ಶೈಲಿಯಲ್ಲಿ ಬರೆದಿದ್ದಾರೆ ಇದೀಗ ಪುಸ್ತಕರೂಪವಾಗಿ ಬಂದಿದೆ.

ಈ ರೀತಿಯ ಪ್ರವಾಸ ಸಾಹಿತ್ಯ ಕನ್ನಡಕ್ಕೆ ತೀರ ಹೊಸ ಮಾದರಿ. ಅದು ನಮ್ಮ ಗರುಡಿಯ ಪೈಲ್ವಾನನಿಂದಲೇ ಬಂದಿದೆ ಎಂದು ನಮಗೆ ಜಂಬ. ಈ ಕಡ್ಡಿ ಪೈಲ್ವಾನನ ಶ್ರಮಕ್ಕೆ ತಕ್ಕ ಆಹಾರ, ಆರೋಗ್ಯ, ಐಶ್ವರ್ಯಗಳನ್ನು ಯಾರಾದರೂ, ಹೇಗಾದರೂ ಎಂದಾದರೂ ಕೊಡಲಿ, ಕನ್ನಡ ಜನರನ್ನು ನಗೆಮುಖದವರನ್ನಾಗಿಸಲು ಯತ್ನಿಸಿದ ಈತನಿಗೆ ದೇವರಲ್ಲದೆ, ಮತ್ತಾರು ಗತಿ ?

"ಗಾಂಪರ ಗುಂಪು" ಕನ್ನಡ ಹಾಸ್ಯ ಸಾಹಿತ್ಯದಲ್ಲೊಂದು ಕಿಲೋ ಮೀಟರು ಕಲ್ಲು. ಕನ್ನಡಿಗರು ಇದನ್ನ ತಿಳಿದಿದ್ದರೆ ಸಾಕು. ಎರವಲು ತಂದೇ ಓದುವರು.

—ಮುನಿರಾವು.

ಕೊರವಂಜಿ

ಕೆಂಪೇಗೌಡ ಸರ್ಕಲ್, ಬೆಂಗಳೂರು–೯

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು, ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿ ಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ಮಿಕ್ಕ ವಿಚಾರಗಳನ್ನು ವ್ಯವಸ್ಥಾಪಕರಲ್ಲೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩–೦೦
ಬಿಡಿ ಪ್ರತಿ ಕೇವಲ ೨೫ ಪೈಸೆ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೇ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು. ಹಾಗೆ ಬದಲಾವಣೆಯಾದ ವಿಳಾಸವನ್ನು ತಿಳಿಸುವಾಗ ತಮ್ಮ ಚಂದಾ ಸಂಖ್ಯೆಯನ್ನೂ ತಿಳಿಸಬೇಕಾಗಿ ವಿನಂತಿ.

NEWS AGENTS

1. ಶ್ರೀ ಮರಿಯಪ್ಪ,
ನೀಲಕಂಠೇಶ್ವರ ಸ್ಟೋರ್ಸ್
ಮಡಕೇರಿ.

2. ಶ್ರೀ ಆದಪ್ಪನಾಯಿಕ್,
ಹಟ್ಟಿ, ರಾಯಚೂರು ಜಿಲ್ಲೆ.

3. ಶ್ರೀ ಕೆ. ನಾರಾಯಣರಾವ್,
ಸಿರಾ

Reg. No. B.G. 343 KORAVANJI October 1964

Printed by B. S. Iyengar, Bangalore-2

Publisher—B. N. Gupta Editor—M. Shivaram